

# ಚಿಗುರು

ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು ।
ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ ॥
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ।
ಜಸವು ಜನಜೀವನಕೆ - ಮಂಕುತಿಮ್ಮ ॥

ವಾರ್ಷಿಕ ಸಂಚಿಕೆ


ಸಂಪುಟ : 01 ಸಂಚಿಕೆ : 03 ಡಿಸೆಂಬರ್, 2018

## ಭಾಷಾ ಸಂಘದ ಸಹಯೋಗದೊಂದಿಗೆ



# ಲೇಖನಗಳ ಸಂಗ್ರಹ





ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ), ಶಿಕಾರಿಪುರ

## ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ

(ಅನುದಾನಿತ, ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಶಾಶ್ವತ ಸಂಯೋಜಿತ ಮತ್ತು ಎನ್.ಸಿ.ಟಿ.ಇ.
ಯು.ಜಿ.ಸಿ ಅಧಿನಿಯಮ 2 (f),ಸೆಕ್ಷನ್ 12 (B) ಮನ್ನಣೆ ಪಡೆದಿದೆ.
ಹಾಗೂ ನ್ಯಾಕ್‌ನಿಂದ ಸಿ.ಜಿ.ಪಿ.ಎ 2.70 ಅಂಕಗಳೊಂದಿಗೆ B ಗ್ರೇಡ್ ಮಾನ್ಯತೆ ಹೊಂದಿದೆ.

ಶಿವಮೊಗ್ಗ ರಸ್ತೆ, ಶಿಕಾರಿಪುರ – 577 427, ಶಿವಮೊಗ್ಗ ಜಿಲ್ಲೆ
☎: 08187 – 222383, 222067 ಮಿಂಚಂಚೆ: kumadvathibed@gmail.com

# ಭಾಷಾ ಸಂಘದ ಸದಸ್ಯರುಗಳು


ಅಕ್ಷತಾ ಸಿ.
ಗೌಡ


ಅಶ್ವಿನಿ.ಹೆಚ್


ದೀಪಿಕಾ.ಡಿ


ದ್ರಾಕ್ಷಾಯಿಣಿ
ಕಾಗೇರ್


ಗಿರೀಶ್
ಕೆ.ಆರ್


ಲತಾ
ಮಾಕನೂರ


ಮಹಮ್ಮದ್
ಸಾಬ್


ಮಲ್ಲಿಕಾರ್ಜುನ


ನಳಿನಾ
ಬಿ.ಹೆಚ್


ನವೀನ್
ಕುಮಾರ್ .ವಿ


ಶಿವಕುಮಾರ್
ಎಂ.ಹೆಚ್


ಸುಮಿತ್ರ
ಡಿ.ಹೆಚ್


ಅಶ್ವಿನಿ ಟಿ


ಚೈತ್ರಾ


ದಿವ್ಯ ಜೋತಿ


ಗಾಯಿತ್ರಿ


ಮೀನಾಕ್ಷಿ
ಗಿರಿಸಿನಕೊಪ್ಪ


ರಂಜಿತಾ ಡಿ.ಎ


ರುಜಿಯಾ


ಶಿಲ್ಪಾ ಟಿ


ಶ್ರೀ ಹರಿ

ಚಿಗುರು
ವಾರ್ಷಿಕ ಪತ್ರಿಕೆ
ಡಿಸೆಂಬರ್ 2018,
ಸಂಪುಟ : 01 ಸಂಚಿಕೆ : 03


**ಅಧ್ಯಕ್ಷರು**

**ಡಾ. ಜಯಶ್ರೀ ವಿ.ಆರ್**
ಪ್ರಾಚಾರ್ಯರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

**ಪ್ರಧಾನ ಸಂಪಾದಕರು :**

**ಶ್ರೀ ವೀರೇಂದ್ರ ಕುಮಾರ ವಾಲಿ ಎಸ್.,**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

**ಶ್ರೀ ರವಿ ಹೆಚ್.,**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

**ಸಹ ಸಂಪಾದಕರು :**

ಭಾಷಾ ಸಂಘದ ಸರ್ವಸದಸ್ಯರು.

ಚಿಗುರು
ವಾರ್ಷಿಕ ಪತ್ರಿಕೆ
ಭಾಷಾ ಸಂಘ
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ,
ಶಿಕಾರಿಪುರ 577-427
ಫೋನ್ : 08187 – 222067
Email :
kumadvathibed@gmail.com



# ಪರಿವಿಡಿ


| ಕ್ರಮ ಸಂಖ್ಯೆ | ಸಂಗತಿಗಳು | ಪುಟ ಸಂಖ್ಯೆ |
|---|---|---|
| 01 | ಕನ್ನಡದ ಸ್ಥೂಲ ನೋಟ | 1 |
| 02 | ನೀತಿ ಕಥೆ | 2 |
| 03 | ಕವನಗಳು | 3-4 |
| 04 | ಸ್ವತಂತ್ರ ಬದುಕಿಗೆ ಸ್ಪೂರ್ತಿ ಹಕ್ಕಿಗೂಡು | 5 |
| 05 | ಅಮ್ಮ | 6 |
| 06 | ಮುನ್ನುಡಿಗಳು | 7-8 |
| 07 | ಚಂದಿರ | 9-10 |
| 08 | ಹನಿಗವನಗಳು | 11-12 |
| 09 | ಕವನ ಸಂಕಲನಗಳು | 13 |
| 10 | ಸ್ವಾಮಿ ವಿವೇಕಾನಂದ | 14 |
| 11 | ಸ್ನೇಹ | 15 |
| 12 | ಅಮ್ಮನ ಮಡಿಲು | 16 |
| 13 | ನಮ್ಮ ನಗರದ ಬದುಕು | 17 |
| 14 | ಮೂಢನಂಬಿಕೆ | 18-19 |
| 16 | ನನ್ನ ಬಾಲ್ಯ | 19 |
| 17 | ಸದ್ಗುರು ನಮ್ಮ ಜೀವನ ನಿಮ್ಮ ಕೈಯಲ್ಲಿ | 20-21 |
| 18 | ಗಂಗಾನದಿಯ ಶುದ್ಧೀಕರಣ | 22 |
| 19 | ಕನ್ನಡ ರಾಜ್ಯೋತ್ಸವ | 23-24 |
| 20 | ಮಕ್ಕಳೇ ಮನೆಯ ಮಾಣಿಕ್ಯ : ಮಕ್ಕಳೇ ದೇಶದ ಸಂಪತ್ತು | 25-26 |
| 21 | ಗುರುವಿಗೊಂದು ನಮನ | 26 |

ಸಿರಿಗನ್ನಡಂಗೆಲ್ಗೆ ಸಿರಿಗನ್ನಡಂಬಾಳ್ಗೆ



# ಕನ್ನಡದ ಸ್ಥೂಲ ನೋಟ



ಕನ್ನಡಕ್ಕೆ ಸುಮಾರು ಇನ್ನೂರು ವರ್ಷದ ವೈವಿಧ್ಯ ಪೂರ್ಣವೂ ಸುದೀರ್ಘವೂ ಆದ ಸಾಂಸ್ಕೃತಿಕ ಪರಂಪರೆಯಿದ್ದರೂ ಅದರ ಕ್ರಮಬದ್ಧ ಅದ್ಯಯನ ನಡೆದಿದ್ದು ಹದಿನೆಂಟನೆಯ ಶತಮಾನದ ಪೂರ್ವಾರ್ಧದಲ್ಲಿ ಈ ಅಧ್ಯಯನದಲ್ಲಿ ಕನ್ನಡ ಪಂಡಿತ ಪರಂಪರೆಯ ಸಾಧನೆಯ ಸ್ಥೂಲ ನೋಟವನ್ನು ಹಾಗೂ ಕನ್ನಡ ಪಾಂಡಿತ್ಯ ಲೋಕದಲ್ಲಿ ಹಲವಾರು ಕನ್ನಡ ಪುತ್ರರ ಸಾಧನೆಯನ್ನು ವಿವೇಚಿಸಬಹುದು. ಕನ್ನಡದ ಹಲವಾರು ವಿದ್ವಾಂಸರು ಕನ್ನಡ ವ್ಯಾಕರಣ ಪರಂಪರೆ. ಕನ್ನಡ ಭಾಷೆಯ ಐತಿಹಾಸಿಕ ವಿವರಗಳು. ಕನ್ನಡ ಭಾಷೆಯ ಸ್ವರೂಪ. ಹಾಗೂ ವೈಶಿಷ್ಟಗಳನ್ನು ಕನ್ನಡ ಭಾಷೆಯ ಚರಿತ್ರೆಯಲ್ಲಿ ನಿರೂಪಿಸಿದ್ದಾರೆ.

ಸಾಹಿತ್ಯ ಸಾಧನೆಯನ್ನು ಅವಲೋಕಿಸಿದಾಗ ಮಾಹಿತಿ ಸಂಗ್ರಹ ಮತ್ತು ಅವುಗಳ ಸಂಯೋಜನೆ ಅವರಿಗೆ ಮುಖ್ಯವಾಯಿತು. ಇದರಿಂದ ಹೊಸ ಸಂಸ್ಕೃತಿಯ ಪರಿಚಯ ಆಡಳಿತ. ವ್ಯವಹಾರ. ಹಾಗೂ ಪರಸ್ಪರ ವಿಚಾರ ವಿನಿಮಯ ಸುಲಭವಾದ ಭಾಷಾ ಕಲಿಕೆಯಲ್ಲಿ ತುಂಬ ಆಸಕ್ತರಾಗಿದ್ದ ಅವರು ಬಹು ಬೇಗನೆ ಕನ್ನಡವನ್ನು ಕಲಿತರು ಧಾರ್ಮಿಕ ಸಾಹಿತ್ಯ ರಚನೆ ಸೀಮಿತಗೊಳ್ಳದೆ ಪಠ್ಯ ರಚನೆ. ಗ್ರಂಥ ಸಂಪಾದನೆ ವ್ಯಾಕರಣ ಕೋಶ ರಚನೆ ಹಾಗೂ ಸಾಹಿತ್ಯ ಚರಿತ್ರೆಯ ಸಂಯೋಜನೆ ತೊಡಗಿ. ತಮ್ಮ ಅಗತ್ಯವನ್ನು ಪೂರೈಸುವುದಕ್ಕಾಗಿ ಅವರು ಸಾಹಿತ್ಯಾಧ್ಯಯನಕ್ಕೆ ತೊಡಗಿಸಿಕೊಂಡರು. ಕನ್ನಡೇತರರಿಗೆ ಕನ್ನಡವನ್ನು ಕಲಿಯುವುದಕ್ಕಾಗಿ ಇಂಗ್ಲೀಷನಲ್ಲಿ ಕನ್ನಡ ವ್ಯಾಕರಣ ರಚಿಸಿದರು.

ಕನ್ನಡ ಭಾಷೆಯ ಸ್ವರೂಪವನ್ನು ಸುಲಭವಾಗಿ ತಿಳಿಸಿಕೊಡಬೇಕೆಂಬುದೇ ಅವರ ವ್ಯಾಕರಣ ರಚನೆಯ ಮುಖ್ಯ ಉದ್ದೇಶ. ಸರಳವಾದ ಗದ್ಯದಲ್ಲಿ ವ್ಯಾಕರಣ ನಿಯಮಗಳನ್ನು ಸುಲಭವಾದ ಉದಾಹರಣೆಗಳನ್ನು ಬಳಸಿಕೊಂಡು ನಿರೂಪಿಸಿರುವುದು ಎದ್ದು ಕಾಣುವ ಅಂಶವಾಗಿದೆ. ಅಂತು ಆ ಶತಮಾನದ ಹಿಂದಿನಿಂದ ನಮ್ಮ ಕನ್ನಡ ದೇವಮಂದಿರ ಅಲಂಕರಿಸುತ್ತಾ ಬಂದಿರುವುದು ನಿಜ. ಈಗ ನಮ್ಮ ಆಧುನಿಕತೆಯ ಕನ್ನಡ ಪ್ರಪಂಚದ ಮುಂದಿರುವ ಪ್ರಶ್ನೆ ಎಂದರೆ ಸುಂದರವಾಗಿರುವ ನಮ್ಮ ಕನ್ನಡ ಸಾಹಿತ್ಯವನ್ನು ಮತ್ತಷ್ಟು ಸೌಂದರ್ಯ ಹೆಚ್ಚಿಸುವುದು ಹೇಗೆ ಎಂಬುದು.

ಕನ್ನಡ-ಕನ್ನಡಿಗರಲ್ಲಿ ಇರುವ ಕುಂದು ಕೊರತೆಗಳೇನು? ಈ ಹಲವಾರು ಯೋಚನೆ ಸಮಸ್ಯೆಗಳನ್ನು ನಿವಾರಿಸಲು ಬಗೆ ಹೇಗೆ ಮತ್ತು ಯಾವ ಮಾರ್ಗವನ್ನು ಅನುಸರಿಸಬೇಕು ನಮ್ಮ ಗುರಿಯೇನು ಎಂಬ ಬಗ್ಗೆ ನಾವು ಯೋಚಿಸಬೇಕಿದೆ. ಗದ್ಯ. ಪದ್ಯ ಇವುಗಳ ವಿಷಯದಲ್ಲಿ ನಮ್ಮ ಸಾಹಿತ್ಯ ಪ್ರಪಂಚ ಹೊಸ ಯುಗದತ್ತ ಕಾಲಿಡಬೇಕು. ಹೊಸ ಹೊಸ ಮಾರ್ಗಗಳು ಹುಟ್ಟುತಿರಬೇಕು.

**(ಎಮ್. ಚಿದಾನಂದಮೂರ್ತಿ ಸಾಹಿತ್ಯ ಸಾಧನೆ ಪುಸ್ತಕದಿಂದ)**

ಸುಮಿತ್ರ ಡಿ.ಹೆಚ್
ದ್ವಿತೀಯ ಬಿ.ಇಡಿ
ಪ್ರಶಿಕ್ಷಣಾರ್ಥಿ

## ನೀತಿ ಕತೆ

ನೀರನ್ನು ಕೊಂಡೊಯ್ಯಲು ಭೀಮಣ್ಣ ಎರಡು ಮಣ್ಣಿನ ಕೊಡಪಾನಗಳನ್ನು ಇಟ್ಟುಕೊಂಡಿದ್ದ. ನಿತ್ಯ ಕುತ್ತಿಗೆಯ ಮೇಲೆ ಅಡ್ಡಲಾಗಿ ಮಡಿಕೆ ನೇತುಹಾಕಿಕೊಂಡು ನೀರನ್ನು ಕೊಂಡೊಯ್ಯುತ್ತಿದ್ದ ಒಂದು ಮಡಿಕೆ ಬಿರುಕು ಕಾಣಿಸಿಕೊಂಡಿದ್ದರೆ ಮತ್ತೊಂದು ಚೆನ್ನಾಗಿತ್ತು. ಮಡಿಕೆಯಲ್ಲಿ ಗುರುಗಳ ಆಶ್ರಮಕ್ಕೆ ತುಂಬಿಕೊಂಡಷ್ಟು ನೀರು ತಲುಪುತ್ತಿತ್ತು.

ಆದರೆ .ಬಿರುಕು ಬಿಟ್ಟ ಮಡಿಕೆಯಲ್ಲಿ ಅರ್ಧದಷ್ಟು ನೀರು ಮಾತ್ರ ಸಿಗುತ್ತಿತ್ತು ಹೀಗೆಯೆ ನಿರಂತರ ಎರಡು ವರ್ಷ ಸಾಗಿತು. ಹೌದು ಚೆನ್ನಾಗಿ ಮಡಿಕೆ ಸಹಜವಾಗಿಯೇ ಪ್ರಶಂಸೆ ಪಾತ್ರವಾಗುತ್ತದೆ. ಆದರೆ ಬಿರುಕುಬಿಟ್ಟ ಮಡಿಕೆ ತನ್ನನು ತಾನೇ ಹಿಯಾಳಿಸಿಕೊಳ್ಳುತ್ತದೆ. ಒಂದು ದಿನ ಭೀಮಣ್ಣನನ್ನು ಕೇಳುತ್ತದೆ 'ನನಗೆ ನಾಚಿಕೆ ಯಾಗುತ್ತಿದೆ. ನನ್ನನ್ನು ಕ್ಷಮಿಸಿಬಿಡು'. ಎನ್ನುತ್ತದೆ .. ಏಕೆ? ನಿನಗೇಕೆ ನಾಚಿಕೆಯಾಗ ಬೇಕು? ಭಿಮಣ್ಣ ಕೇಳುತ್ತಾನೆ. ಬಿರುಕು ಕಾಣಿಸಿಕೊಂಡ ಕಾರಣ ಕಳೆದ ಎರಡು ವರ್ಷ ದಿಂದ ನ್ನ ಸಾಮರ್ಥ್ಯ‌ಸ ಅರ್ಧದಷ್ಟು ಮಾತ್ರಾ ಸಾಗಿಸಿದ್ದೆನೆ ನಿನ್ನ ಪ್ರಯತ್ನಕ್ಕೆ ತಕ್ಕಂತೆ ಪೂರ್ತಿ ನೀರು ಸಿಕ್ಕಿಲ್ಲ ಕ್ಷಮಿಸಿ ಎನ್ನುತ್ತದೆ ಬಿರುಕು ಮಡಿಕೆ.

ನಾವು ನೀರನ್ನು ತುಂಬಿಕೊಂಡು ಗುರುಗಳ ಆಶ್ರಮಕ್ಕೆ ಹೋಗುವಾಗ ರಸ್ತೆ ಬದಿಯಲ್ಲಿ ಸುಂದರವಾದ ಹೂ ಗಿಡಗಳು ಬೆಳೆದಿರುವುದನ್ನು ಗಮನಿಸು ಎಂದು ಭಿಮಣ್ಣ ಹೇಳುತ್ತಾನೆ. ಅದರಂತೆ, ಬಿಸಿಲಿನಲ್ಲೂ ಹೂ ಗಿಡಗಳೂ ನಳನಳಿಸುತ್ತಿರುವುದನ್ನು ಬಿರುಕು ಕೊಡಪಾನ ಗಮನಿಸಿತ್ತದೆ. ಆದರೂ ತನ್ನ ಸಾಮ್ರ್ಯದ ಅರ್ಧದಷ್ಟು ನೀರು ಸಾಗಿಸುವುದಕ್ಕೆ ಕ್ಷಮೆ ಕೋರುತ್ತದೆ. ನೀರು ಸಾಗಿಸುವಾಗ ನೀನು ಇರುವ ಕಡೆಯ ಹೂಗಿಡಗಳು ಬೆಳೆದು ಕಂಗೊಳಿಸುತ್ತಿರುವುದನ್ನು ನೀನು ನೋಡಿಲ್ಲವೇ? . ಚೆನ್ನಾಗಿರುವ ಮಡಕೆಯ ಕಡೆಯಲ್ಲಿ ಒಣಗಿ ನಿಂತ ಗಿಡಗಳು ಮಾತ್ರ ನಿಂತಿವೆ. ನಿನ್ನಲ್ಲಿ ನೀರು ಸೋರಿಕೆಯಾಗುತ್ತಿರುವುದನ್ನು ನನಗೆ ಮೊದಲಿನಿಂದ ತಿಳಿದಿದೆ. ಇದರ ಲಾಭವನ್ನು ನಾನು ಪಡೆದುಕೊಂಡೆ. ನೀನು ಸಾಗುವ ಕಡೆಯಲ್ಲಿಯೇ ಹೂಗಳ ಬೀಜ ಬಿತ್ತಿದೆ. ಎರಡು ವರ್ಷದಿಂದ ನಾನು ಲಾಭ ಪಡೆದುಕೊಂಡಿದ್ದೆನೆ ನೀನು ಸಾಗುವ ಕಡೆಯಲ್ಲಿ ನಾನೀ ಹೂಗಳ ಬೀಜ ಬಿತ್ತಿದೆ ನಿತ್ಯ ಅವುಗಳಿಗೆ ನೀನು ನೀರು ಹಾಕಿದೆ ಎರಡು ವರ್ಷದಿಂದ ಗುರುಗಳ ಪ್ರಾರ್ಥನಾ ಮಂದಿರ ಅಲಂಕಾರಕ್ಕೆ ಬಳಸಿದ್ದೇನೆ ಮಿಕ್ಕ ಹೂಗಳನ್ನು ನಾನು ಮಾರಾಟಮಾಡಿ ಹಣ ಗಳಿಸಿದ್ದೇನೆ ನೀನಿಲ್ಲದಿದ್ದರೆ ದೇವರಿಗೆ ಅಲಂಕಾರ ಮಾಡಲು ಸಾಧ್ಯವೇ ಆಗುತ್ತಿರಲಿಲ್ಲ 'ಎನ್ನುತ್ತಾನೆ ಭೀಮಣ್ಣ ಆಗ ಬಿರುಕಿನ ಮಡಿಕೆ ಹೆಮ್ಮೆ ಪಡುತ್ತದೆ

ಮೊಹಮ್ಮದ್ ಸಾಲ್
ದ್ವಿತೀಯ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ

## ಕವನಗಳು

ಜೀವನ ಒಂದು ಪಯಣ
ನಾವೆಲ್ಲರು ಅದರ ಪಯಣಿಗರು
ಅಪರಿಚಿತರಾಗಿ ಆಗಮನ
ಪರಿಚಿತರಾಗಿ ನಿರ್ಗಮನ

ಈ ಪಯಣದಲ್ಲಿ ಸಾಕಷ್ಟು
ಸಿಹಿ ಕಹಿ ಅನುಭವಗಳಿರುವವು
ಸಿಹಿ ಅನುಭವಗಳಿಂದ ಹಿಗ್ಗದೆ
ಕಹಿ ಅನುಭವಗಳಿಂದ ಕುಗ್ಗದೆ
ಆತ್ಮವಿಶ್ವಾಸದಿಂದ ಮುನ್ನಡೆಯಿರಿ
ಆಗ ನೋಡಿ ಆದರ್ಶ ಜೀವನದ ಅಂದ

ಬೇಡವೆಂದರು ಸಾಗುವುದು ಬದುಕು
ಆ ಬದುಕಿನಲ್ಲಿ ಸಿಹಿ ಇರಲಿ ಕಹಿ ಇರಲಿ
ಹಾರುವುದು ಹಕ್ಕಿ ಬಾನೆತ್ತರದವರೆಗೂ
ತನ್ನ ರೆಕ್ಕೆ ಮುರಿಯುವ ವರೆಗೂ

ವಿದ್ಯೆ ಎಂಬುದು ಕಲೆ
ಕಲಿಯಲು ಬೇಕು ತಲೆ
ಕಲಿತರೆ ಸಿಗುವುದು ಬೆಲೆ

ಪುಸ್ತಕದಲ್ಲಿ ಇರುವುದು ಹಾಳೆ
ಹಾಳೆಯಲಿ ಇರುವುದು ಅಕ್ಷರ
ಅಕ್ಷರದಲ್ಲಿ ಇರುವುದು ಕಲಿಕೆ
ಕಲಿಕೆಯಲ್ಲಿ ಇರುವುದು ಶಿಕ್ಷಣ

ಶಿಕ್ಷಣದಲ್ಲಿ ಇರುವುದು ಶಿಕ್ಷಕ
ಕುಮದ್ವತಿ ಗಾಗಿ ಬರೆಯುವೆ ಒಂದು ಕವಿತೆ
ಕವಿತೆಗಳಲ್ಲಿ ಕುಮದ್ವತಿಯ ಸ್ನೆಹವನ್ನು ಕಲಿತೆ
ಕುಮದ್ವತಿಯ ಗೂಡಲ್ಲಿಹುದು ಕವಿತೆಗಳ ಕಂತೆ
ಓ...ಕುಮದ್ವತಿ ನಿನ್ನ ಇತಿಹಾಸಕೆ ನಾ ಸೋತೆ

ಅದೃಷ್ಟವಂತರಿಗೆ ಅವಕಾಶ ಸಿಗಿತ್ತದೆ
ಬುದ್ಧಿವಂತರು ಅವಕಾಶ ಸಿಕ್ಕಿಸಿಕೊಳ್ಳುತ್ತಾರೆ
ಸಿಕ್ಕಿರುವ ಅವಕಾಶ ಬಳಸಿಕೊಂಡವರು
ಯಶಸ್ವಿಯಾಗುತ್ತಾರೆ

ಪುಸ್ತಕದಲ್ಲಿ ಇರುವುದು ಹಾಳೆ
ಹಾಳೆಯಲಿ ಇರುವುದು ಅಕ್ಷರ
ಅಕ್ಷರದಲ್ಲಿ ಇರುವುದು ಕಲಿಕೆ
ಕಲಿಕೆಯಲ್ಲಿ ಇರುವುದು ಶಿಕ್ಷಣ
ಶಿಕ್ಷಣದಲ್ಲಿ ಇರುವುದು ಶಿಕ್ಷಕ

ಕುಮದ್ವತಿ ಗಾಗಿ ಬರೆಯುವೆ ಒಂದು ಕವಿತ
ಕವಿತೆಗಳಲ್ಲಿ ಕುಮದ್ವತಿಯ ಸ್ನೆಹವನ್ನು ಕಲಿತೆ
ಕುಮದ್ವತಿಯ ಗೂಡಲ್ಲಿಹುದು ಕವಿತೆಗಳ ಕಂತೆ
ಓ...ಕುಮದ್ವತಿ ನಿನ್ನ ಇತಿಹಾಸಕೆ ನಾ ಸೋತೆ

ಅದೃಷ್ಟವಂತರಿಗೆ ಅವಕಾಶ ಸಿಗಿತ್ತದೆ
ಬುದ್ಧಿವಂತರು ಅವಕಾಶ ಸಿಕ್ಕಿಸಿಕೊಳ್ಳುತ್ತಾರೆ
ಸಿಕ್ಕಿರುವ ಅವಕಾಶ ಬಳಸಿಕೊಂಡವರು
ಯಶಸ್ವಿಯಾಗುತ್ತಾರೆ.

ನವೀನ್ ಕುಮಾರ
ದ್ವಿತೀಯ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ

## ಸ್ವತಂತ್ರ ಬದುಕಿಗೆ ಸ್ಫೂರ್ತಿ ಹಕ್ಕಿಗೂಡು

ಪ್ರಾಣಿಗಳಲ್ಲಿ ಸ್ವಾರ್ಥ ಪ್ರಾಣಿ ಮನುಷ್ಯ ತನ್ನೆಲ್ಲ ಸಂಬಂಧಗಳು ತನ್ನ ಜೊತೆ ಇರಲು ಬಯಸುತ್ತಾನೆ. ಲಾಭವಿದ್ದರೆ ಸ್ನೇಹದ ಹಸ್ತ ಚಾಚುತ್ತಾನೆ, ಸ್ವಾಧೀನದ ಪ್ರೀತಿ ಹುಡುಕುತ್ತಾನೆ. ಎಲ್ಲ ನಂಟುಗಳು ತನ್ನ ಕೆಳಗಿರಲು ಬಯಸುತ್ತಾನೆ. ಕೆಲವರಲ್ಲಿ ನಿಜ ಪ್ರೀತಿ ಇದ್ದರು ಇರಬಹುದು ಆದರೆ ಮನುಷ್ಯನ ಎಲ್ಲ ಹೋದರು ಸಂಬಂಧಗಳಲ್ಲಿ ಜೋತು ಬೀಳುತ್ತಾನೆ.

ಇದಕ್ಕೆಲ್ಲ ವಿರುದ್ಧ ಹಕ್ಕಿಗೂಡು. ಹಕ್ಕಿ ಸ್ವತಂತ್ರದ ಸಂಕೇತ ಕೇವಲ ಹಾರುವಿಕೆಯಿಂದಲ್ಲ ಬದುಕಿನ ಕಲಿಕೆಯಲ್ಲೂ ಸಹ ಹಕ್ಕಿ ತನ್ನ ಬದುಕಿನಲ್ಲಿ ಸ್ವತಂತ್ರ ಕಂಡು ಕೊಂಡಿರುವುದಲ್ಲದೆ ತನ್ನ ಸಂತಾನಕ್ಕು ತನ್ನ ಗೂಡಿನಲ್ಲಿ ರಕ್ಷಣೆ ಆರೈಕೆ ನೀಡಿ ಜೀವನಕ್ಕೆ ಬೇಕಾದ ಹಾರಾಡುವಿಕೆ, ಆಹಾರ ಹುಡುಕುವಿಕೆ ವಿಭಿನ್ನ ಕಾಲದ ಬದುಕು ಅನೇಕ ಸಂಗತಿಗಳನ್ನು ಕಲಿಸುತ್ತದೆ. ಅದು ತನ್ನನ್ನು ಕಾಪಾಡಿಕೊಳ್ಳುವ ಸಾಮಾರ್ಥ್ಯ ಬೆಳಸಿಕೊಂಡಾಗ ಗೂಡಿನಿಂದ ಸ್ವತಂತ್ರವಾಗಿ ಹಾರಾಡಲು ಬಿಡುತ್ತದೆ. ಕಲಿಕೆಯ ನಂತರದ ಸ್ವತಂತ್ರ ಬದುಕಿಗೆ ಒಂದು ಉತ್ತಮ ಸ್ಫೂರ್ತಿ ಎಂದು ಹೇಳಲು ಹಕ್ಕಿ ಗೂಡಿಗಿಂತ ಇನ್ನೊಂದು ಉದಾಹರಣೆ ಬೇರೆ ಇಲ್ಲ.



ಮಲ್ಲಿಕಾರ್ಜುನ
ದ್ವಿತೀಯ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ

# ಅಮ್ಮ

ನಿನ್ನೆದೆಯ ಅಮೃತ ಕುಡಿನ ಬೆಳೆಸಿದೆ ನನ್ನ
ನಿನ್ನ ಪ್ರೀತಯ ಮಮತೆಯಲ್ಲಿ ಆಟವಾಡಿಸಿದೆ ನನ್ನ
ಅಳುವಾಗ ಕಂದನೆಂದು ಲಾಲಿ ಹಾಡಿದೆ ನೀನು.
ಬಿದ್ದಾಗ ಕಂದನೆಂದು ದುಃಖಿಸಿದೆ ನೀನು
ನಿದ್ರಿಸುವ ಮುನ್ನ ಪ್ರೀತಿಯ ವಾತ್ಸಲ್ಯದಿ ಮಡಿಲ
ಹಾಸಿದೆ ನೀನು ಪ್ರತಿ ಜನ್ಮದಲ್ಲೂ
ನಿನ್ನ ಮಡಿಲು ಕೂರುವೆ ನಾನು

ನಿನ್ನ ಪ್ರೀತಿಯ ಪ್ರವಾಹದಲ್ಲಿ ಈಜಲು ಕಲಿತವನಾನು
ನಾನು...
ನಿನ್ನ ಕಣಕಡಲಿನಲ್ಲಿ ಬೆಳ್ಳಿ ಚುಕ್ಕಿ ಕಂಡವನಾನು
ನಿನ್ನ ಗುಣ ರೂಪ ಸೆಳೆಯುತಿದೆ ನನ್ನ
ಮಾತನಾಡಲು ಭಯ ಕಾಡುತಿದೆ ನನ್ನ
ಆದರೂ ಪ್ರತಿಕ್ಷಣ ನಿನಗಾಗಿ ಹಂಬಲಿಸುತಿದೆ ನನ್ನ
ಮನ......

ಅಕ್ಷತಾ ಜಿ.ಗೌಡ
ದ್ವಿತೀಯ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ.

## ಮುನ್ನುಡಿಗಳು

ಇನ್ನೊಬ್ಬರ ತಪ್ಪನ್ನು ಹುಡುಕುತ್ತ
ಕಾಲ ವ್ಯಯ ಮಾಡುವ ಬದಲು ಅದೇ
ಸಮಯವನ್ನು ನಮ್ಮೊಳಗಿನ ದೌರ್ಬಲ್ಯ
ಗುರುತಿಸಿಕೊಳ್ಳಲು ಉಪಯೋಗಿಸಬೇಕು.

ಜಗತ್ತಿನಲ್ಲಿ ನೀನು ಯಾರೊಂದಿಗೂ
ಹೋಲಿಸಿಕೊಳ್ಳಬೇಡ
ನಿನಗೆ ನಿನ್ನದೇ ಸಾಮರ್ಥ್ಯವಿದೆ'

ಸೋತೆ ಎಂದು ನೀ ಮುಂದಿಟ್ಟ ಹೆಜ್ಜೆ ಹಿಂದಿಡಬೇಡ
ಏಕೆಂದರೆ ಯಾರಿಗೆ ಗೊತ್ತು ಆ ಹೆಜ್ಜೆ ನಿನ್ನ ಇತಿಹಾಸವನ್ನೆ
ಸೃಷ್ಟಿ ಮಾಡುವ ಹೆಜ್ಜೆಯಾಗಿರಬಹುದು'

ಪ್ರತಿಯೊಂದು ದಿನದ ಸಣ್ಣ ಪ್ರಯತ್ನವು
ಸಾಧನೆಯ ಶಿಖರಕ್ಕೆ ಕೊಂಡೊಯ್ಯುತ್ತದೆ
ಪ್ರತಿ ದಿನದ ಪ್ರಯತ್ನದಲ್ಲಿ
ಪಡೆಯುವ ಅನುಭವಗಳು ವ್ಯಕ್ತಿಯನ್ನು
ರೂಪಿಸುತ್ತವೆ.

ಜಗತ್ತಿನಲ್ಲಿ ಎಲ್ಲರೂ ಸಮರ್ಥರೇ
ಆದರೆ ಕೆಲವರು ಅವಕಾಶ ಸಿಗದೆ
ಅಸಮರ್ಥರಾಗಿದ್ದಾರೆ'.

'ಸೋಲು ಕಲಿಸುವ ಪಾಠವನ್ನು
ಜಗತ್ತಿನ ಯಾವ ವಿಶ್ವವಿದ್ಯಾಲಯವೂ
ಕಲಿಸಲಾರದು.

ಇಂದಿನ ಕಾರ್ಯ ನಾಳೆಯ
ಸುಂದರ ಭವಿಷ್ಯವನ್ನು
ನಿರ್ಮಿಸುತ್ತದೆ.

ಕೊಂಬೆ ಮೇಲೆ ಕುಳಿತ ಹಕ್ಕಿ ನಂಬಿರುವುದು ಬಲವಾದ
ಕೊಂಬೆಯನ್ನಲ್ಲ ತನ್ನ ಪುಕ್ಕ ರೆಕ್ಕೆಯನ್ನು
ಸಾವಿಗೂ ಸೆಡ್ಡು ಹೊಡೆದು
ಸಾಧನೆ ಮಾಡಿದ ಸಾಧಕರಿದ್ದಾರೆ.

'ತ್ಯಾಗದಿಂದ ಸಾಧನೆ ಸಾಧ್ಯ.
ನಂಬಿಕೆ ಅಂದ್ರೆ ಸೂರ್ಯನ ಹಾಗೆ ಇರಬೇಕು.
ಸಂಜೆ ಮುಳುಗಿದರೂ ನಾಳೆ ಮತ್ತೆ ಬಂದೇ
ಬರುತ್ತಾನೆ ಅನ್ನುವಂತೆ..

ಯಾರು ನನ್ನನ್ನು ಮಣ್ಣಿನಲ್ಲಿ ಹೂಳಲು ಅನೇಕ ಬಾರಿ
ಪ್ರಯತ್ನಿಸಿದರೂ ಅವರಿಗೆ ಗೊತ್ತಿರಲಲ್ಲ ನಾನೊಂದು
ಬೀಜವೆಂದು.

ಒಂದು ಕಲ್ಲು ಶಿಲೆಯಾದರೆ
ಕೈಮುಗಿದು ನಮಿಸುತ್ತಾರೆ
ಮೆಟ್ಟಿಲಾದರೆ ತುಳಿದು
ಚಪ್ಪಲಿ ಬಿಡುತ್ತಾರೆ

ನಮ್ಮ ಜೀವನವು ಸಹ ಹಾಗೆ
ಸಾಧಿಸಿದರೆ ನಮ್ಮವನೆಂದು
ಹೊಗಳುತ್ತಾರೆ
ಸೋತರೆ ನಮ್ಮವರೆ ನಮ್ಮನ್ನು
ನೋಯಿಸಿ ನಗುತ್ತಾರೆ..

ಚೈತ್ರ ಕೆ.ಎಂ
ಚತುರ್ಥ ಬಿ.ಇಡಿ
ಪ್ರಶಿಕ್ಷಣಾರ್ಥಿ

## "ಚಂದಿರ"

ಓ ಬಾನ ಚಂದಿರ

ನೀ ಅದೆಂತಹ ಸುಂದರ

ಮೋಡದ ಮರೆಯ ಮಿನುಗುವ ನೀನು

ನಯನ ಮನೋಹರ

ಅದೆಷ್ಟೋ ಹೆಸರುಗಳು ನಿನಗೆ

ಪಾಪುವಿಗೆ ನೀನೆ ಚಂದಮಾಮ

ಪ್ರೇಮಿಗಳಿಗೆ ನೀನು

ಪ್ರೇಮ ಚಂದಮ

ವಿಜ್ಞಾನಿಗಳಿಗೆ ನೀನೆಂದು ಆಕಾಶಕಾಯ

ಜ್ಯೋತಿಷಿಗಳಿಗೆ ಅದೇನೋ ತಾರಾಧಿಪತಿ....

ನಿನ್ನ ಕೀರ್ತಿ ಅಪಾರ

ಬಣ್ಣಿಸಲವಳ ಒಲವಿನ ಚಂದ್ರಮ

## "ಕನಸು"

ತಂಗಾಳಿ ತಂಪು ಚೆಂದ

ಮೌನದ ಮಾತೆ ಚೆಂದ

ಪ್ರೀತಿಯ ಕಾಳಜಿ ಚೆಂದ

ನನ್ನ ಬಾಳಿಗೆ ನೀ ಚೆಂದ.....

## "ಆಧಾರ"

ರಾಗವು ಬೇಕಂತೆ ಸಂಗೀತಕ್ಕೆ

ಧೀರನು ಬೇಕಂತೆ ಯುದ್ಧಕ್ಕೆ

ಕೇಶವು ಬೇಕಂತೆ ಹೆಣ್ಣಿಗೆ

ಕ್ಷೀಣ ಸ್ವರವಂತೆ ನೋವಿಗೆ

ಶಂಖವು ಬೇಕಂತೆ ತೀರ್ಥಕ್ಕೆ

ತಂಗಾಳಿ ತಂಪಂತೆ ಮನಸ್ಸಿಗೆ.....

## "ಅಮ್ಮ"

ಅಮ್ಮ ಬೈತಾಳೆ ನನ್ನನ್ನು
ನೀನು ಕೋಪಿಷ್ಠೆ
ಆದರೆ ನಾನಿನ್ನು ಮರೆತಿಲ್ಲ
ನನ್ನ ಕಪಿಚೇಷ್ಟೆ.

## "ಸಂಪಿಗೆ"

ಓ ನನ್ನ ಸಂಪಿಗೆ
ಬಾ ನೀನು ತಂಪಗೆ

ಸೊಂಪಾದ ಸವಿ ಸಂಜೆಯಲಿ
ಸೂಸು ನಿನ್ನ ಪರಿಮಳವ
ತುಸು ನೀಗಿಸು ನನ್ನೆದೆಯ ಹಂದರವ
ಕುಸುಮ ಲೋಕದ ಸುಂದರಿ ನೀನು
ನಿನ್ನ ಪರಿಮಳಕ್ಕೆ ದಾಸಿ ನಾನು
ನಾ ಕಂಡ ಕನಸಿನ ಪ್ರತಿಬಿಂಬ ನೀನು

ನಿನ್ನ ಪರಿಮಳಕ್ಕೆ ಸರಿಸಾಟಿ ಯಾರಿಹರು?
ಓ ಸಂಪಿಗೆಯೇ ಹೇಳು
ನಾನಾಗಲೇ ನಿನ್ನಂತೆ
ನಿನ್ನ ಸೌಂದರ್ಯದಂತೆ. ಪರಿಮಳದಂತೆ.

ದ್ರಾಕ್ಷಾಯಿಣಿ
ದ್ವಿತೀಯ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ.

# "ಹನಿಗವನ"

## ನೋವು

ಗೀರಿ ಹೋದ ನಾಯಕ್ಕೆ
ಸೇರಿಸಿ ಉಪ್ಪು ಖಾರವ
ಮೀರಿ ನಿಂತಿದೆ ನೀವು ಮೌನವ.

## ಕಸ

ಹೊರಗೆ ಬಿದ್ದಿರುವ ಸಿಪ್ಪೆ ಕಾಗದ
ಇತರ ಕಸಗಳನ್ನು ತೊಟ್ಟಿಗೆ ಎಸೆದಿದ್ದೀರಿ!
ಒಳಗೆ ಬಿಟ್ಟಿರುವ ಅರಿಷಡ್ವರ್ಗವ.

## ಜೀವನ:

ಜೀವನವು ಒಂದು ಸುಂದರ ಸಾಗರ
ನೋಡುವುದಕ್ಕೆ ಮಾತ್ರ
ಆದರೆ ಸಾಗರದ ದಡವನ್ನು ಸೇರಲು
ಬಲು ಹರೋ ಹರ.

## ಹೂ

ಗಿಡವಾಗಿ ಇರುವುದು
ಮುಳ್ಳಾಗಿ ಇರುವುದು
ಬಿಸಿಲು, ಮಳೆ ಎಲ್ಲವನ್ನು ಸಹಿಸಿ
ಅದುವೆ ಗುಲಾಬಿ ಹೂ.

## ನನ್ನ ಕವಿತೆ

ನಾನು ಬರೆದಿಹೆನು ಹಲವಾರು ಕವಿತೆ
ಸೀಮಿತಗೊಂಡಿತು ಇರು ನನಗಾಗಿ ಮಾತ್ರ.
ನಾ ಕಾಣಲಾರೆನು ಇದರಿಂದ ಹರ್ಷತೆ
ಬೇಕಿತ್ತ ನನಗೆ ಈ ಅಸಹನೀಯ ಪಾತ್ರ
ಆದರೂ ಖುಷಿ ಪಡುವೆ ಎಲ್ಲರು ಓದುವರೆಂಬ
ನೆಪದಲ್ಲಿ...

## ಮುಂಗುರುಳು

ಆ ನಿನ್ನ ಮುಂಗುರುಳು
ಬಾಗಿ ಬಾಗಿ ಮುತ್ತಿಡುತ್ತಿವೆ ನಿನ್ನ ಕೆನ್ನೆಗೆ
ಹೆಬ್ಬಾಯಿತು ಅದಕ್ಕೆ ನೀ ಕೊಟ್ಟ ಸಲಿಗೆ
ಅದಕ್ಕೆ ಅವು ಏರಿ ಕುಳಿತಿವೆ ನಿನ್ನ ತಲೆಗೆ.

## ತುಡಿತ-ಮಿಡಿತ

ಕಣ್ಣನೋಟ ಬೆರೆತದಿವಸ
ಹೃದಯದಲ್ಲಿ ಆದಾಗ ಏನೋ ವಿರಸ
ನೀ ನನ್ನೊಂದಿಗಿರಬಾರದೇ ಪ್ರತಿ ನಿಮಿಷ.

## ತೃಪ್ತಿ-ಅತೃಪ್ತಿ

ಮೈ ಬಗ್ಗಿಸಿ ದುಡಿಯುವವನ
ಬದುಕು ತೃಪ್ತಿ
ಶ್ರೀಮಂತನ ಬದುಕು ಅತೃಪ್ತಿ
ಎರಡು ಇಲ್ಲದ ಬಡವನ ಬದುಕು ಸಂತೃಪ್ತಿ.

ಅಶ್ವಿನಿ ಹೆಚ್
ದ್ವಿತೀಯ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ.

# ಕವನ ಸಂಕಲನಗಳು

ಸ್ನೇಹಿತೆಯರು:

ಮನಸ್ಸಿಗೆ ಮುದ ನೀಡುವವರು
ಮನವನ್ನು ಅರ್ಥವಿಸಿಕೊಳ್ಳುವವರು
ಸಕಾಲದಲ್ಲಿ ಸಹಾಯಕ್ಕೆ ಬಂದವರು
ಅವರೇ ನನ್ನ ಸ್ನೇಹಿತೆಯರು

ಪಂಚ ವರ್ಷಗಳ ಕಾಲೇಜು ಜೀವನದಲ್ಲಿ
ನಾಕಂಡೆ ಅದೆಷ್ಟೋ ಸ್ನೇಹಿತೆಯರನ್ನು
ಕಾಲೇಜಲ್ಲಿ ಹಾಸ್ಟೆಲಲ್ಲಿ ಎಲ್ಲ ನೋಡಿದರಲ್ಲಿ
ಅಬ್ಬಾ ಮರೆಯುದುಂಟೆನು ನಾನವರನ್ನ

ಒಮ್ಮೊಮ್ಮೆ ಮನಸ್ಸಿಗೆ ನೋವು ನೀಡುವ
ಮಗದೊಮ್ಮೆ ನನ್ನ ನೋವು ದೂರ ನೀಡುವ
ಆ ನನ್ನ ತುಂಟ ಗೆಳತಿಯರನು
ಪಡೆಯಲು ನಾ ಮಾಡಿರುವೆ ಪುಣ್ಯವನ್ನು

ಅಕ್ಕರೆಯ ಮಾತಿನೊಳು
ಸಕ್ಕರೆಯ ಸವಿಯಂತೆ
ಸದ್ಗುಂದಿ ಮನವ ಸೆಳೆದರು
ಆ ನನ್ನ ನಲ್ಮೆಯ ಸಖಿಯರು
ಇರಲಿ ಈ ಪ್ರೀತಿ ನಂಬಿಕೆ
ಎಂದೆಂದು ಬಾರದಿರಲಿ ಅಪನಂಬಿಕೆ
ಕಾಡದಿರಲಿ ಬಂಜತನ
ಬಾಡದಿರಲಿ ಸ್ನೇಹತನ

ಬಿಟ್ಟು ಹೋಗುವುದು ಕಾಲೇಜನ್ನು
ಆದರೆ ಈ ಸ್ನೇಹವನ್ನಲ್ಲ
ಈ ನಿಮ್ಮ ಭವಿಷ್ಯತ್ತಿಗೆ
ಬೇಡುವೆನು ಉಜ್ವಲ ಭವಿಷ್ಯವನ್ನು

ದೀಪಿಕಾ ಡಿ.
ದ್ವಿತೀಯ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ.

# ಸ್ವಾಮಿ ವಿವೇಕಾನಂದ

ಸ್ವಾಮಿ ವಿವೇಕಾನಂದರ ಜೀವನವನ್ನು ಓದುವುದೆಂದರೆ ಪೂರ್ಣತೆಯನ್ನು ಮುಟ್ಟಿದ ಒಂದು ಬೃಹತ್ ಜೀವಿಯ ವಿಕಸನವನ್ನೆಲ್ಲ ಪರಿಚಯ ಮಾಡಿಕೊಂಡತೆ. ಜೀವಿಸಿದ ಇತರೆ ಕಾರ್ಯಕ್ಷೇತ್ರಗಳಲ್ಲಿ ಪ್ರಖ್ಯಾತಿಯನ್ನು ಗಳಿಸಿದ ವ್ಯಕ್ತಿಗಳಾದರೂ ಮಧ್ಯದಲ್ಲಿ ಯಾವುದೊ ಒಂದು ಮೆಟ್ಟಿಲಿನಲ್ಲಿ ಹೋರಾಡುತ್ತಿರುವುದನ್ನು ನೋಡುವೆವು. ಪೂರ್ಣತೆಯ ಕಡೆಗೆ ಅವರ ಗಮನವಿರಬಹುದು. ಆದರೆ ಅದನ್ನು ಮುಟ್ಟಿದವರು ಅಪರೂಪ. ಸ್ವಾಮಿ ವಿವೇಕಾನಂದರಾದರೂ ಅಂಗೈ ಮೇಲಿನ ನೆಲ್ಲಿಕಾಯಿಯಂತೆ ಮಯಕ್ತಿಯನ್ನು ವಾಪಡಿಸಿಕೋಂಡಿರುವ. ಅವರ ಜೀವನವು ಪಂಜರದಲ್ಲಿ ಸಿಕ್ಕಿದ ಕೇಸರಿಯ ಮರಿಯಂತೆ ಆಂಭವಾಗುವುದು. ಪ್ರಚಂಡ ಸಾಧನೆಯನ್ನು ಮಾಡಿ ತನ್ನ ಕ್ರೂರನಖಗಳಿಂದ ಬಂಧಿಸಿದ್ದ ಸಲಾಕೆಗಳನ್ನು ಕಿತ್ತು ಹೊರಬಂದು ಮುಕಿಯ ಸ್ವಾತಂತ್ರ್ಯದಿಂದ ಘರ್ಜಿಸುತ್ತಿರುವುದನ್ನು ಕೇಳುವೆವು. ತಾವು ಮಾತ್ರ ಮುಕ್ತಿಯನ್ನು ಗಳಿಸಿಕೊಂಡು ಧನ್ಯರಾಗಿ ಹೋದರಲ್ಲ ಇವರು ಭವಜೀವಿಗಳಿಗೆಲ್ಲ ಮುಕ್ತಿಯ ದಾರಿಯನ್ನು ತೋರಿದವರು. ಇವರು ಯಾವುದೋ ಒಂದು ಸಣ್ಣ ಜಾತಿಯ ದೃಷ್ಟಿಯಿಂದ. ಕೋಮಿನ ದೃಷ್ಟಿಯಿಂದ. ಮತದ ದೃಷ್ಟಿಯಿಂದ ಒಂದು ವರ್ಗವನ್ನು ಮಾಡಿದವರಲ್ಲ. ಬುದ್ಧಿಜೀವಿ ಯಾವ ಕಾಲದಲ್ಲಿರಲಿ. ಯಾವ ದೇಶವದಲ್ಲಿ ಇರಲಿ. ಯಾವ ಕುಲಗೋತ್ರಗಳಿಗೆ ಸೇರಿರಲಿ. ಯಾವ ಸಂಸ್ಕಾರದ ಬಲೆಗೆ ಸಿಕ್ಕಿ ನರಳುತ್ತಿರಲಿ ಎಲ್ಲರ ನೆರವಿಗೆ ಒದಗಿಬರುವ ಸಂದೇಶ ಇವರದು. ಸ್ವಾಮಿ ವಿವೇಕಾನಂದರು ಆಡಿದ ಮಾತಿಗಿಂತ. ಬರೆದ ಬರಹಗಳಿಗಿಂತ ಶತಪಾಲು ದೊಡ್ಡದು ಅವರ ಜೀವನ. ಅವರ ಬದುಕಿನ ಕಥೆ ಜೀವನದ ಅಂಧಕಾರವನ್ನು ಪರಿಹರಿಸುವುದು. ಬೇಸತ್ತ ಜೀವಿಗೆ ಒಂದು ನವ ಸ್ಫೂರ್ತಿಯನ್ನು ಕೊಡುವುದು ಹಾಗೂ ಚೇತನವನ್ನು ತುಂಬುವುದು. ಹೊಸ ಶಕ್ತಿಯ ಝರಿಯೊಂದು ಆತನ ಜೀವನದಲ್ಲಿ ಜಿನುಗುವಂತೆ ಮಾಡುವುದು.

ಗಿರೀಶ್ ಕೆ.ಆರ್
ದ್ವಿತೀಯ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ.

# ಸ್ನೇಹ

ಸ್ನೇಹ ಎಂಬುದು ಪವಿತ್ರವಾದ, ಹಿತವಾದ, ಒಳ್ಳೆಯ ಮತ್ತು ಉನ್ನತವಾದ ಭಾವನೆ ಎಂಬುದಾಗಿ ಮಾರ್ಕ ಟೈನ್ ಸುಂದರವಾದ ವ್ಯಾಖ್ಯಾನವನ್ನು ನೀಡಿದ್ದಾರೆ. ಹಾಗೆಯೇ ಅರಿಸ್ಟಾಟಲ್ ಎನ್ನುವ ತತ್ವಜ್ಞಾನಿಯು "ಸ್ನೇಹ ಎಂಬುದು ಎರಡು ದೇಹಗಳಲ್ಲಿ ಸಂಚರಿಸುವ ಒಂದೇ ಆತ್ಮ ಎಂದು ವರ್ಣಿಸಿದ್ದಾರೆ. ಸ್ನೇಹ ಎಂಬ ಸಂಕೋಲೆಯಲ್ಲಿ ಪ್ರತಿಯೊಬ್ಬ ಮನುಷ್ಯ ಬಂಧಿಯಗಿರುತ್ತಾನೆ. ಹಾಗಾಗಿಯೇ ಮಾನವ ಸಂಘ ಜೀವಿ, ಸ್ನೇಹ ಜೀವಿ ಎಂದೆನಿಸಿಕೊಂಡಿದ್ದಾನೆ.

ಸ್ನೇಹ ಎಂಬುದು ಕೇವಲ ಮನುಷ್ಯ – ಮನುಷ್ಯರ ನಡುವಿನ ಬಾಂಧವ್ಯದ ಬೆಸುಗೆ ಮಾತ್ರವಲ್ಲ ನೋವಿನಲ್ಲಿ ನಲಿವನ್ನು ನೀಡುವ ಸಂಜೀವಿನಿ. ಒಬ್ಬ ಸ್ನೇಹಿತೆಯು ಇನ್ನೊಬ್ಬ ಸ್ನೇಹಿತೆಯಲ್ಲಿ ಮಾತ್ರ ತಮ್ಮ ನೋವು ನಲಿವುಗಳನ್ನು ಹಂಚಿಕೊಳ್ಳಲು ಸಾಧ್ಯ .ಈಡಿಜುಜ ಱ ಟಜುಜು ಎ ಚ ಜಡಿಜುಜ ಱಜಜುಜು. ಎಂಬ ಇಂಗ್ಲೀಷ್ ನಾಣ್ಣುಡಿಯಂತೆ ಕಷ್ಟದಲ್ಲಿ ಸುಖದಲ್ಲಿ ಸಹಭಾಗಿಯಾಗುವವನೇ ನಿಜವಾದ ಸ್ನೇಹಿತ. ಅದೇ, ನಿಜವಾದ ಸ್ನೇಹ. ಒಬ್ಬರ ಸ್ನೇಹ ಬೆಳೆಸುವುದು ಸುಲಭ ಆದರೆ ಅದನ್ನು ಉಳಿಸಿ, ಬಳೆಸಿ ಪೋಷಿಸುವುದು ಕಷ್ಟ. ಇದೊಮದು  ಗಾಜಿನ ವಸ್ತುವಿನಂತೆ, ಇದನ್ನು ಬಹಳ ಜಾಗರೂಕತೆಯಿಂದ ಕಾಪಾಡಬೇಕು. ನಂಬಿಕೆಯೇ ಸ್ನೇಹದ ಅಡಿಗಲ್ಲು. ಸ್ನೇಹ ಮಾಡುವಾಗ ನಿಧಾನಿಸಿದರು ಅಂತಕವಿಲ್ಲ ಆದರೆ ಅದರಲ್ಲಿ ವಿಶ್ವಾಸವನ್ನು ಇಟ್ಟು ಬದುಕಬೇಕು.

ಒಬ್ಬ ಮನುಷ್ಯ ಹತ್ತು ಹಲವು ಜನರ ಗೆಳೆತನ ಸಂಪಾದಿಸಬಹುದು ಆದರೆ ಅದರಲ್ಲಿ ಉತ್ತಮವಾದ ಸ್ನೇಹಿತರನ್ನು ಪಡೆಯುವುದೆ ಮುಖ್ಯವೆಂಬ ಸ್ನೇಹ ಮಾಡಬೇಕು.ಸ್ನೇಹ ಮಾಡುವ ಆತುರದಲ್ಲಿ ಕೆಟ್ಟವರ ಸಹವಾಸ ಮಾಡದಂತೆ ಆಲೋಚಿಸಿ, ಪರೀಕ್ಷಿಸಿ ಸ್ನೇಹ ಗಳಿಸಬೇಕು. ಈ ಸ್ನೇಹವನ್ನು ನೇರ ನಡೆ ನುಡಿ ಹಾಗೂ ಸತ್ಯದ ಹಾದಿಯಲ್ಲಿರುವ ಮನುಷ್ಯನ ಗೆಳೆತನವನ್ನು ಮಾಡುವುದು ಕಷ್ಟವೇ ಸರಿ. ಹಾಗೆಯೇ ನಮ್ಮ ಸ್ನೇಹ, ನಮ್ಮ ಯೋಗ್ಯತೆಯನ್ನು ಕೂಡ ಅಳೆಯಬಲ್ಲದು ಎಂಬುದು ಗಮನದಲ್ಲಿ ಇಡಬೇಕಾದ ಅಂಶ.

ದಿವ್ಯಜ್ಯೋತಿ
ಚತುರ್ಥ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ.

# ಅಮ್ಮನ ಮಡಿಲು

ಅಮ್ಮ ಅನ್ನೋ ಶಬ್ದಕ್ಕೆ ಸಿಲುಕದ್ದು........ ಎರಡುವರೆ ಅಕ್ಷರದಲ್ಲಿ ಸಾವಿರಅರ್ಥವನ್ನು ಭಅನ್ನು ಸೂಚಿಸುತ್ತದೆ. ಈ ಭೂಮಿಯಲ್ಲಿ ಕಣ್ಣು ನೋಡುವ ಪ್ರತಿಯೊಂದು ಮಗುವಿನ ಬರುವ ಮೊದಲ ಪದವೇಅಮ್ಮ ಆ ಮಗು ಅಳುವಿನಲ್ಲೂ ಮಗು ತನ್ನ ತಾಯಿಯನ್ನು ಪ್ರೀತಿಯಿಂದ ಅಮ್ಮ ಎಂದು ಕರೆಯುತ್ತಾರೆ. ಯಾವುದೇ ಭಾಷೆಯೂ ಅಮ್ಮ ಎಂಬುದು ಅತ್ಯಂತ ಮಧುರವಾದ ಶಬ್ಧ ಪುಟ್ಟ ಕಂದನ ಮೊದಲ ತೊದಲು ನುಡುಯು ಅಮ್ಮ_... ನಮ್ಮ ವೇದೋಪನಿಷತ್ತುಗಳಲ್ಲಿ ವಿಘ್ನ ನಿವಾರಕನಾದ ಗಣಪ ಪ್ರಥಮ ವಂದಿಪನಾದರೆ, ಪ್ರಥಮ ಪೂಜಿತ ತಾಯಿ **ಮಾತೃ ದೇವೋಭವ. ಪಿತೃ ದೇವೋಭವ. ಆಚಾರ್ಯ ದೇವೋಭವ.ಅತಿಥಿ ದೇವೋಭವ** ಎಂದು ಹೇಳುವಾಗ ತಾಯಿಗೆ ಮೊದಲ ಸ್ಥಾನ. ನಮ್ಮ ಈ ಪ್ರಪಂಚದಲ್ಲಿ ತಾಯಿಗಿಂತ ಮಿಗಿಲಾದ ದೇವರಿಲ್ಲ. ಆ ಮಹಾನ್ ತಾಯಿಯೆ ಪ್ರತ್ಯಕ್ಷ ದೇವತೆ. ಅಮ್ಮ ಎಂದರೆ ಅದೇನೊ ಚೈತನ್ಯ ದೇವರು ದಯಾಮಯ ಕರುಣಾಮಯಿ. ತಾಯಿಯೂ ಕರುಣಾಮಯಿ ತ್ಯಾಗಮಯಿ ದಯಾಮಯಿ. ಸೃಷ್ಠಿಯಲ್ಲಿ ಭಗವಂತ ತಾಯಿಯ ರೂಪದಲ್ಲಿ ಪ್ರತಿಯೊಬ್ಬರಿಗು ಸಂಚರಿಸಾಗುತ್ತೇನೆ. ಅಮ್ಮನನ್ನು ವರ್ಣಿಸಲು ನನಗಂತು ಕಂಡಿತ ಸಾಧ್ಯವಿಲ್ಲ.

ತಾಯಿಯ ಬಗ್ಗೆ ಬರೆಯಲು ಅದೆಷ್ಟು ಮತಗಳಾದರು ಸಾಧ್ಯವಿಲ್ಲ ಸಾಲುವುದಿಲ್ಲ. ನವಮಾಸ ಗರ್ಭದಲ್ಲಿ ಹೊತ್ತು ಹಲವು ನೋವು ಯಾತನೆ ಅನುಭವಿಸಿ. ಸೃಷ್ಠಿಗೆ ಕಾರಣವಾಗಿ ತನ್ನ ಮಡಿಲಲ್ಲಿಯಿಟ್ಟು ಸಣ್ಣ ನೋವು ಆಗದಂತೆ ಜನನವಾಗಿ ಕಾಪಾಡಿತಾನು ಅರೆಹೊಟ್ಟೆ ಇದ್ದರು ಮಗುವಿಗೆ ಹೊಟ್ಟೆತುಂಬ ಕೈತುತ್ತು ಹಾಕಿ ಬೆಳೆಸುವ ತಾಯಿಗೆ ತಾಯಿಯೆ ಸರಿಸಾಟಿ. ಈ ಜಗತ್ತಿನಲ್ಲಿ ತಾಯಿ ಪ್ರೀತಿಸುವಷ್ಟು ಕಾಳಜಿ ತೋರಿಸುವಷ್ಟು. ಯಾರು ನಮ್ಮನ್ನು ಪ್ರೀತಿಸುವಷ್ಟು ಯಾರು ನಮ್ಮನ್ನು ಪ್ರೀತಿಸುವದಿಲ್ಲ. ಎಲ್ಲಾ ಕಷ್ಟವನ್ನು ಒಬ್ಬಳೆ ಅನುಭವಿಸಿಕೊಂಡು ನಮಗೆ ಸುಖವನ್ನು ಕೊಡೋ ಮಹಾನ್‌ತಾಯಿ... ಈಗಿನ ಕಾಲದಲ್ಲಿ ಹುಡುಗ ಹುಡುಗಿಯರು ಅರ್ಥವಿಲ್ಲದ ಪ್ರೀತಿಯಲ್ಲಿ ಬಿದ್ದು ಕೊನೆಗೆ ತಮ್ಮನ್ನು ಹೆತ್ತ ತಂದೆ ತಾಯಿಯನ್ನು ದಿಕ್ಕರಿಸುತ್ತಾರೆ. ಆದರೆ ತಾಯಿ ತನ್ನ ಮಕ್ಕಳನ್ನು ಯಾವತ್ತು ದಿಕ್ಕರಿಸುವುದಿಲ್ಲ. ದೇವರು ಎಲ್ಲರಿಗು ಒಳ್ಳೆ ತಾಯಿಯನ್ನೇ ಕೊಟ್ಟರೂ. ಎಲ್ಲ ತಂದೆ-ತಾಯಿಗಳಿಗೆ ಒಳ್ಳೆ ಮಕ್ಕಳನ್ನು ಕೊಡುವುದಿಲ್ಲ.

ಸ್ನೇಹಿತರೆ.....ಮುದಿ ವಯಸ್ಸಿನಲ್ಲಿರುವ ನಿಮ್ಮ ತಂದೆ ತಾಯಿಯನ್ನು ಪ್ರೀತಿಯಿಂದ ಕಾಪಾಡಿಕೊಳ್ಳಿ ಯಾಕೆಂದರೆ ಆ ಸಮಯದಲ್ಲಿ ದೊಡ್ಡ ಜಗತ್ತು ಆಗಿರುತ್ತದೆ. ದಯವಿಟ್ಟು ತಂದೆ-ತಾಯಿಯರನ್ನು ಯಾರು ಮುದಿ ವಯಸ್ಸಿನಲ್ಲಿ ಒಂಟಿಯಾಗಿ ಬಿಡಬೇಡಿ ಎಂದು ಕೋರಿಕೊಳ್ಳುತ್ತೇನೆ ತಾಯಿಗಿಂತಾ ದೊಡ್ಡ ಜಗತ್ತಿಲ್ಲ.

ಗುಡಿ ಇಲ್ಲದ ದೇವಾ ಅಮ್ಮ
ಕಲ್ಮಶವಿಲ್ಲದ ಪ್ರೀತಿಯಮ್ಮ
ಅಮೃತಕ್ಕಿಂತ ಸಿಹಿ ಅಮ್ಮ
ನನ್ನ ಹೃದಯದ ಪ್ರತಿ ಮಾತು ಅಮ್ಮ

ಮೀನಾಕ್ಷಿ ಗಿರಿಸಿನಕೊಪ್ಪ
ಚತುರ್ಥ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ.

# ನಮ್ಮ ನಗರದ ಬದುಕು

ನಮ್ಮ ನಗರಕೆ ಬಡಿದರಿಕ್ತತೆಯಗರಕಿಲ್ಲ
ಜಗದಲ್ಲಿ ಎಲ್ಲು ಸರಿ ಮೀಸಲು
ಪ್ರಗತಿ ಹೆಸರಿನ ಶಾಪ. ಸೌಂದರ್ಯ ಶಾಂತತೆಗೆ
ಕಾಣಿಸಿದ ಪರಗತಿಯೊ ಬಲು ಕುಶಾಲು.

ಎಲ್ಲೆಲ್ಲು ಮಾರ್ಪಾಟು. ಎಲ್ಲ ನೀಟು ಸಪಾಟು.
ನುಡಿಗೆ ದೇಶಾವರಿಯ ನಯಾಗಿಲೀಟು:
ವ್ಯಕ್ತಿಗಳ ವರ್ತನೆಯೊಗಿರವಿ ಅಂಗಡಿಫೇಟು:
ಸ್ನೇಹಪರ ಸೌಹಾರ್ದಗಳಿಗಿಲ್ಲ ರೇಟು.

ದಿನದಿನವು ದರವೇರಿ ಇಲ್ಲಿ ಎಲ್ಲ ದುಬಾರಿ:
ಮಾನ. ಅಂತಃಸಾಕ್ಷಿ. ತಲೆಯ ಹೊರತು:
ಶಾಲೆ. ದೇಗುಲಕಿಂತ ಮದ್ಯಾಲಯಗಳತ್ಯಧಿಕ.
ನಾಗರಿಕನೆನಿಸಿ ಕೊಳಲಿದುವೆ ಗುರುತು.

ಆ ಪಾಟ ಮೆರೆದಿದ್ದ ಪಕ್ಷಿ ಕ:ಲಕೀಗಿಲ್ಲ
ತಲೆಯ ಮರೆಸಲು ತಾವು ಷಹರಿನಲ್ಲಿ.
ಕಣ್ಣು ಹಾಯಿಸಿದೆಡೆಗೆ ಕಂಗೆಡಿಸುವುದು ಉಕ್ಕು.
ಕಾಂಕ್ರೀಟು. ಮರಮುಟ್ಟು. ಮರಳು. ಜಲ್ಲಿ.

ವಿಲಾಸೋಪ ಭೋಗಕ್ಕೆ ಪಟ್ಟದಾನೆಯ ಬಡ್ತಿ.
ಮನಸಿನ ವಿಕಾಸವೋ ದುಡಿವಕ’ತ್ರೆ:
ಜ್ಞಾನ ವಿಶ್ವಾಮಿತ್ರ ಧನದ ಮೇನಕೆ ಪಾದ
ಒತ್ತಿರುವ ಗೌರವವ ನಿಟಗಟು ಒತ್ತೆ.

ರಂಜಿತ ಡಿ.ಎಸ್
ಚತುರ್ಥ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ.

## ಮೂಢನಂಬಿಕೆ

ಮೂಢನಂಬಿಕೆಯೆಂಬುದು ಮನುಷ್ಯ ಜನ್ಮತಾಳಿದೆ. ಅಂದಿನಿಂದಲೂ ಆತನ ಜೊತೆಯಲ್ಲಿ ಮೂಢನಂಬಿಕೆಯು ಹುಟ್ಟಿಕೊಂಡಿದೆ. ಮಾನವನ ಅಂತರಂಗ ಎರಡು ವಿಭಾಗಗಳಲ್ಲಿ ವಿಭಾಗಿಸಲ್ಪಟ್ಟಿದ್ದು ಮನಸ್ಸು ಮತ್ತು ಹೃದಯಗಳಾಗಿವೆ. ಮಾನವನ ವಿಚಾರಶೀಲ ಮತ್ತು ಭಾವನಾತ್ಮಕ ಭಾಗಗಳಾಗಿ ನೆಲೆನಿಂತಿವೆ. ಈ ಎರಡು ವಿಭಾಗಗಳು ತದ್ವಿರುದ್ಧವಾಗಿದ್ದು ಒಂದರ ಮಾತನ್ನು ಒಂದು ಕೇಳುವುದಿಲ್ಲ. ಈ ಎರಡು ನಮ್ಮ ಸುತ್ತಮುತ್ತಲು ನಡೆಯುವ ದಿನನಿತ್ಯದ ಚಟುವಟಿಕೆಯಲ್ಲಿ ಅಪಾರವಾಗಿ ಪಾಲ್ಗೊಳುತ್ತೇವೆ. ಈ ಚಟುವಟಿಕೆಯಲ್ಲಿ ಆಲೋಚಿಸುವ ನಂಬಿಕೆ ಹಾಗೂ ಅಪನಂಬಿಕೆಗಳ ವಿಚಾರವೆ ಮೂಢನಂಬಿಕೆಯಾಗಿವೆ.

ಮೂಢನಂಬಿಕೆಗಳು ಧಾರ್ಮಿಕವಾಗಿ. ಸಾಮಾಜಿಕವಾಗಿ. ಸಾಂಸ್ಕೃತಿಗಳಾಗಿ ಹಾಗೂ ವೈಜ್ಞಾನಿಕವಾಗಿ ಮೂಢನಂಬಿಕೆಗಳು ಜಗತ್ತಿನಲ್ಲಿಯೇ ನೆಲೆನಿಂತಿವೆ ಹಾಗೂ ಅನಾದಿಕಾಲದಿಂದ ಇಂದಿನವರೆಗೆ ಸಹ ಮೂಢನಂಬಿಕೆಗಳನ್ನು ನಂಬುತ್ತಲೆ ಬಂದಿದ್ದಾರೆ.ಈ ಮೂಢನಂಬಿಕೆ ಜನರ ಮನಸ್ಸಿನಲ್ಲಿ ನೆಲೆನಿಂತಿದ್ದು ನಗರ.ಗ್ರಾಮೀಣ ಪ್ರದೇಶಗಳನ್ನದೆ ಎಲ್ಲಡೆಲ್ಲಿಯೂ ಇದ್ದು ಮೂಢನಂಬಿಕೆ ಜನರಲ್ಲಿ ನೆಲೆಸಿದೆ.ದೇವರ ಹೆಸರಿನಲ್ಲಿ ಪ್ರಾಣಿಗಳನ್ನು ಬಲಿಕೊಡುವುದು.ಹೋಗುವಾಗ ಬೇಕ್ಕು. ಹಲ್ಲಿ. ಹಾವು. ಮುಂಗುಸಿ. ವಿದವೆಯರ. ಬಂಜೆಯರು. ಗೂಬೆ ಮತ್ತು ಹೆಣ.ತುಂಬಿದ ಕೊಡ. ಸಾಧುಗಳು ಮುಂತಾದ ವಸ್ತು. ಪ್ರಾಣಿಗಳು ಅಡ್ಡಬಂದರೆ ಹಾಗೂ ಪ್ರಾಣಿಗಳು ಸೀನಿದರೆ ಅಪಶಕುನ-ಶಕುನಗಳೆಂಬ ನಂಬಿ ಕೆಲಸವನ್ನು ಮುಂದುವರೆಸುತ್ತಾರೆ ಇಲ್ಲ ನಿಲ್ಲಸುತ್ತಾರೆ.

ನಮ್ಮ ಭಾರತದ ಹಿಂದುಧರ್ಮದಲ್ಲಿ ದೇವಾಲಯ-ದೇವತೆಗಳ ಪೊಜೆ. ಮಾಟ ಮಂತ್ರ ಹೀಗೆ ಹತ್ತುಹಲವುಗಳನ್ನು ನಂಬುತ್ತಾರೆ. ಮುಸ್ಲಿಂ ಧರ್ಮದಲ್ಲಿ ಮಸೀದಿ-ಸಮಾಧಿಗಳ ಆರಾಧನೆ. ಕ್ರೈಸ್ತ ಧರ್ಮದಲ್ಲಿ ಚರ್ಚಗಳಲ್ಲಿ ಪ್ರಾರ್ಥನೆ ಮಾಡುವುದು. ಮೇಣಬತ್ತಿಯನ್ನು ಬೆಳಗಿಸುವುದರ ಮೂಲಕ ಮೂಢನಂಬಿಕೆ ಆಚರಣೆ ಮಾಡುತ್ತಾರೆ. ರೋಮನ್ ಸಾಮ್ರಾಜ್ಯದಲ್ಲಿ ಗೂಬೆಗಳನ್ನು ಒಳ್ಳೆಯ ಸಂಕೇತವೆಂದು ಸಾಗುತ್ತಾರೆ. ಆದೇ ರೀತಿ ಭಾವಲಿಗಳನ್ನು ಕೊಡುತ್ತಿದ್ದು. ವೈಜ್ಞಾನಿಕತೆಯಲ್ಲಿ ತಮ್ಮಷ್ಟಕ್ಕೆ ತಾವೆ ಬದಲಾವಣೆಗಳಾದರೆ ಪವಾಡಗಳೆಂದು ನಂಬುತ್ತಾರೆ ಈ ಮೂಢನಂಬಿಕೆಗಳನ್ನು ಕೆಲವು ವೈಚಾರಿಕರು ಸತ್ಯವೆಂದು ನಂಬಿದರೆ ಕೆಲವುರು ಸುಳ್ಳುನಂಬಿಕೆಗಳೆಂದು ಹೇಳಿದ್ದಾರೆ.

ಇಂತಹ ಮೂಡನಂಬಿಕೆಗೆ ಪ್ರತಿಯೊಬ್ಬ ಮನುಷ್ಯ ಜೀವಿಯ ಮೂಡನಂಬಿಕೆಗೆ ಒಳಗಾಗಿದ್ದಾನೆ. ಮತ್ತು ಮೋಸ ಹೋಗಿದ್ದಾನೆ. ಈ ಮೂಡನಂಬಿಕೆಗಳನ್ನು ಭಾರತದಲ್ಲಿ ಮೊಟ್ಟಮೊದಲು ಮಹಾರಾಷ್ಟ್ರದಲ್ಲಿ ಚಳುವಳಿಯೊಂದಿಗೆ ಆರಂಭಿಸಿ ಮೂಡನಂಬಿಕೆ ನಿಷೇಧ ಕಾಯ್ದೆಯನ್ನು ಜಾರಿಗೆ ತಂದಿತ್ತು. ಆದರೆ ಚಳುವಳಿಯ ನಾಯಕತ್ವ ವಹಿಸಿದ ವ್ಯಕ್ತಿಯನ್ನು ತಿಳಿದ ವಿಚಾರವಂತರೆ ಆತನನ್ನು ಕೊಲೆ ಮಾಡಿಸಿದರು. ಈ ಮೂಲಕ ನಮ್ಮ ಸಮಾಜದಲ್ಲಿ ಮೂಡನಂಬಿಕೆ ಎಷ್ಟು ಆಳವಾಗಿ ಪ್ರಭಾವವನ್ನು ಹೊಂದಿದೆ ಎಂದು ತಿಳಿಯುತ್ತದೆ. ಇಂತಹ ಮೂಡನಂಬಿಕೆಗಳಿಂದ ನಾವು ಪಾರಾಗಲು

ನಮ್ಮ ಬುದ್ಧಿ. ನಮ್ಮ ವಿವೇಚನೆ ನಮ್ಮ ಕೈಯಲ್ಲಿದ್ದರೆ ಸಾಕು ಪಾರಾಗಬಹುದಾಗಿದೆ. ನಾವು ಮೂಢನಂಬಿಕೆಯ ಮಾಯಾ ಜಾಲಕ್ಕೆ ಒಳಗಾಗದೆ ವಿವೇಕವಂತರಾಗಿ, ಪೂರ್ವಾಗ್ರಹಿತರಾಗಿ ಇದ್ದರೆ ಇವುಗಳಿಂದ ದೂರವಿರಬಹುದಾಗಿದೆ.

(ಸಂಗ್ರಹ)
ಲತಾ ಮಾಕನೂರು
ದ್ವಿತೀಯ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ.

## ಆ ನನ್ನ ಬಾಲ್ಯ

ಬರಬಾರದಿತ್ತೇ ಆ ಇನ್ನೊಮ್ಮೆ
ನನ್ನ ಆ ಬಾಲ್ಯ
ಮರಳಿ ಬಾರದೇ ಕಳೆದು
ಹೋಯಿತು ಸವಿನೆನಪಿನ
ಆ ನನ್ನ ಸಂದರ ದಿನಗಳು॥
ಗಂಭೀರತೆಯ ಸಂಗವಿಲ್ಲದೇ
ಜವಾಬ್ದಾರಿಯ ಹೊಣೆಯಿಲ್ಲದೇ
ಜಂಜಾಟದ ಪರಿವಿಲ್ಲದೇ
ಮನಸ್ಸಿನ ಲಗಾಮು ಹಿಡಿಯದೇ
ಕಳೆದು ಹೋಯಿತು ಆ ದಿನಗಳು

ಸುಂದರ ಸವಿಸವಿ ಕ್ಷಣಗಳು
ಬಾಲ್ಯದ ಗೆಳತಿಯ ಪಿಸುಮಾತುಗಳು
ಪಿಸುಗುಡುತ್ತಿವೆ ಮತ್ತೆ ಮತ್ತೆ
ಮೆಲ್ಲಗೆ ಮೆಲ್ಲಗೆ ಕಿವಿಯಲ್ಲಿ
ಆದರೆ ಬರೀ ನೆನಪುಗಳು

ಕಾಲಚಕ್ರ ಉರುಳಿದಂತೆ
ಜಲವಾಗುತ್ತಿದೆ ಜೀವನ
ಆದರೆ ಸಿಗಬೇಕು ಜೊತೆ ಜೊತೆಗೆ
ಚಕ್ರ ಉರುಳಿದಂತೆ, ನಾವು ಉರುಳಬೇಕು
ಬಿದ್ದು ಏಳಬೇಕು, ಓಡಬೇಕು. ಬೇಕು ಇಂತಹ ಜೀವನ.

ನಳಿನಾ ಬಿ.ಹೆಚ್
ದ್ವಿತೀಯ ಬಿ.ಇಡಿ. ಪ್ರಶಿಕ್ಷಣಾರ್ಥಿ

# ಸದ್ಗುರು
## ನಿಮ್ಮ ಜೀವನ ನಿಮ್ಮ ಕೈನಲ್ಲಿ

ಅಂಕೆ ಸಂಖ್ಯೆಗಳನ್ನು ಕಂಡುಹಿಡಿದವನು ಮನುಷ್ಯತಾನೇ? ಅವು ಹೇಗೆ ಮನುಷ್ಯನನ್ನೂ ವ್ಯಾಪಾರವನ್ನೂ ಬದಲಿಸಲು ಸಾಧ್ಯ? ನಿಮ್ಮ ಸಾಮರ್ಥ್ಯದಿಂದ ವ್ಯಾಪಾರ ಬಲದಿಂದಲೋ ಒಂದನ್ನೇ ನಂಬರ್ ಲಕ್ಕಿ ಎಂದು. ಎಲ್ಲಾ ಒಂದೋದೇ ಇದ್ದರೆ ನಿಮಗೆ ಬಹಳ ಅದೃಷ್ಟ ಎಂದು ಒಬ್ಬ ಜ್ಯೋತಿಷ್ಯ ಹೇಳಿದ ಎಂದರೆ ಆಗ ನಿಮ್ಮ ಒಂದು ಕಣ್ಣನ್ನು ಕಿತ್ತು ಹಾಕುವಿರೇನು? ಒಂದು ಕಾಲನ್ನು ಕೈಯನ್ನು ತುಂಡರಿಸುವಿರೇನು? ಇದು ಮೂರ್ಖತನವಲ್ಲವೇ? ಜಗತ್ತಿನಲ್ಲಿ ಪ್ರತಿಯೊಂದಕ್ಕೂ ಜ್ಯೋತಿಷಿಗಳನ್ನು ಕಾಣುವಂತಹ ಮೂಡರು ಬಹಳಷ್ಟು ಜನರಿದ್ದಾರೆ ಜೀವವಿರುವ ನೀವು ಜೀವವೇ ಇಲ್ಲದ ಗ್ರಹಗಳನ್ನು ನಂಬುವ ಮೂರ್ಖತನವೇಕೆ? ಕೆಲವು ಗ್ರಹಗಳಿಗೆ ಗುರುತ್ವಾಕರ್ಷಣೆ ಇರಬಹುದು. ಆದರೆ, ಗಾಢವಾದ ಮನಸಿದ್ದರೆ ಎಲ್ಲ ಕೆಲಸಗಳನ್ನೂ ನೀವೇ ಸಾಧಿಸಬಹುದು ಎಲ್ಲದಕ್ಕೂ ಸ್ವಪ್ರಯತ್ನ ಮುಖ್ಯ. ಏಕಾಗ್ರತೆ ಇರುವವರ ಮೇಲೆ ಈ ಗ್ರಹ ಗತಿಗಳು ಯಾವುದೇ ರೀತಿಯ ಪರಿಣಾಮ ಬೀರಲಾರದು. ನಿಮ್ಮ ಬಾಳ ಸಂಗಾತಿಗಳನ್ನು ಆರಿಸಬೇಕಾದವರು ನೀವೇ ಅಲ್ಲವೇ? ಜ್ಯೋತಿಷಿ ಮತ್ತು ಜಾತಕಗಳ ಹೆಸರಿನಲ್ಲಿ ನಿಮ್ಮ ಜೀವನವನ್ನು ಇತರರ ಕೈಗೆ ನೀಡುವಿರೇಕೆ? ನಿಮ್ಮ ಪತಿಯೊಂದಿಗೆ ಜಗಳವಾಡಿದರೆ ಅದಕ್ಕಾಗಿ ನಿಮ್ಮ ನಕ್ಷತ್ರಗಳನ್ನು ಬಯ್ಯುವಿರೇಕೆ? ನಿಮ್ಮ ಹೆಂಡತಿಯೊಂದಿಗೆ ನೀವು ಬಾಳಲಾಗದಿದ್ದರೆ ನಿಮ್ಮ ಗ್ರಹಗಳನ್ನೇಕೆ ದೂಷಿಸುವಿರಿ? ಒಂದು ದಾಂಪತ್ಯ ಜೀವನ ಯಶಸ್ವಿಯಾಗದಿದ್ದರೆ ಅದಕ್ಕೆ ಇಬ್ಬರು ಹಟಮಾರಿಗಳು ಯಾ ಅಹಂಕಾರಿಗಳು ಕಾರಣರೆ ಹೊರತು ದೂರದಲ್ಲೆಲ್ಲೋ ಇರುವ ನಕ್ಷತ್ರಗಳಲ್ಲ.

ಗಂಡ ಹೆಂಡಿರು ಒಬ್ಬರಿಗೊಬ್ಬರು ಹೊಂದಿಕೊಂಡು ತಮ್ಮ ಬಾಳನ್ನು ಸಂತೋಷವಾಗಿ ನಡೆಸಲು ಸಿದ್ಧರಾದರೆ ದಿನ. ವಾರ. ತಿಥಿ. ನಕ್ಷತ್ರ ಅಥವಾ ಗ್ರಹಗಳು ಏನುತಾನೆ ಮಾಡಿಯಾವು? ನಿಮ್ಮ ಮೇಲೆ ಅವುಗಳಿಗೇನು ದ್ವೇಷ? ನಿಜವಾಗಿ ಹೇಳಿ ನಿಮಗೆ ದೇವರಲ್ಲಿ ಸಂಪೂರ್ಣ ವಿಶ್ವಾಸವಿದೆಯೇ? ಕೆಲವರು ತಮಗೆ ಅಥವಾ ತಮ್ಮವರಿಗೆ ಆರೋಗ್ಯ ಹದಗೆಟ್ಟರೆ ದೇವಸ್ಥಾನಗಳಿಗೆ ಓಡುತ್ತಾರೆ. ದೈರ ದೃಷ್ಟವಶಾತ್ ಅನಾರೋಗ್ಯಕ್ಕೆ ತುತ್ತಾದವರು ಸತ್ತು ಹೋದರೆ ಆಗ ಇವರು ದೇವರೇ ಇಲ್ಲಾ ಅದೆಲ್ಲಾ ಸುಳ್ಳು ಅಂತ ಹೇಳಿ ದೇವರ ಚಿತ್ರಗಳನ್ನು ಫೋಟಗಳ ಮೂಟೆಕಟ್ಟಿ ಬಿಸಾಡುತ್ತಾರೆ.

ದೇವರು ಇದ್ದಾನೆ ಎಂಬುದು ಒಂದು ನಂಬಿಕೆ ಇಲ್ಲಾ ಎನ್ನುವುದು ಮತ್ತೊಂದು ನಂಬಿಕೆ. ಇದ್ದಾನೋ ಇಲ್ಲವೋ ನನಗೆ ಗೊತ್ತಿಲ್ಲಾ ಎನ್ನವುದು ನಿಮ್ಮ ಮನದಾಳದ ಅಪ್ಪಟ ಸತ್ಯ."ನನಗೆ ಗೊತ್ತಿಲ್ಲಾ" ಎಂದು ತಿಳಿದುಕೊಳ್ಳಲು ಯತ್ನಿಸಿದಾಗ ನಿಮಗೆ ಎಲ್ಲವನ್ನೂ ತಿಳಿಸಿಕೊಳ್ಳಲು ದಾರಿಗಳು ದೊರಕುತ್ತವೆ ಬರೀ ಕಲ್ಪನೆಗಳು ಹಾಗೂ ನಂಬಿಕೆಗಳಲ್ಲೇ ಬದುಕುವುದು ಅರ್ಥವಿಲ್ಲ. ದೇವರ ಬಗ್ಗೆ ತಿಳಿಯಲು ನಿಮಗೆ ನಿಜವಾದ ಹಂಬಲವಿದ್ದರೆ ಬೇರೊಬ್ಬರು ಹೇಳಿದ್ದನ್ನೆಲ್ಲಾ ಬಿಡಿ ನೀವೆಲ್ಲಿದ್ದೀರೋ ಅಲ್ಲಿಂದಲೇ ಅವನನ್ನು ಹುಡುಕಲು ಆರಂಭಿಸಿ ಮೊದಲು ನಿಮ್ಮೊಳಗೇ ಇರುವ ದೈವವನ್ನು

ಹುಡುಕಲುಯತ್ನಿಸಿ ಅಲ್ಲಿ ನೀವುಆತನನ್ನುಅರಿತು ಬಿಟ್ಟರೆ ಆಗ ಅವನು ಎಲ್ಲೆಲ್ಲೂ ಇದ್ದಾನೆ ಅನ್ನುವುದನ್ನು ನೀವೇ ಒಪ್ಪಿಕೊಳ್ಳಬಹುದು.ಜೀವನದ ಬಗ್ಗೆ ಸರಿಯಾಗಿ ಅರಿತುಕೊಳ್ಳದೆ ಭಂಡತನದಲ್ಲಿಬಾಳುತ್ತಾ ದೇವರ ಮನೆಯಲ್ಲಿ ಎಷ್ಟು ದೇವರುಗಳ ಚಿತ್ರಗಳನ್ನು ನೇತು ಹಾಕಿ ಪೂಜಿಸಿದರೇನು? ಒಂದೊಂದು ಕ್ಷಣವನ್ನು ಸಂತಸದಿಂದ ಅನುಭವಿಸುವುದನ್ನು ಕಲಿತರೆ ಜೀವನವೆಲ್ಲಾ ಸಂತೋಷವೇ.ಮಾನವ ಎಷ್ಟೆಷ್ಟು ರೀತಿಯಲ್ಲಿ ತನ್ನನ್ನು ತಾನು ಹಂಚಿಕೊಂಡಿದ್ದಾನೆ ಎಂದರೆ ಅವನನ್ನು ಪುನಃ ಒಟ್ಟುಗೂಡಿಸಿ ಸಮಗ್ರತೆಗೆ ತರಲು ಬಹಳ ಕಾಲದ ಸಾಧನೆ ಅಗತ್ಯವಾಗುವುದು. ಏಕೆಂದರೆ. ಜನರು ಅನೇಕ ವಿಷಯಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿರುವುದೇ ಸಮಸ್ಯೆ ಆದ್ದರಿಂದ ಆತ್ಮ ಬಾಧೆಗೆ ಇಡಬೇಕಾದ ಮೊದಲ ಹೆಜ್ಜೆ ನಿಮ್ಮನ್ನು ನೀವು ಒಂದುಗೂಡಿಸಿಕೊಂಡು ಸಮಗ್ರವಾಗುವುದು. ನಾವು ಕೂಡಾ ನಾವಾಗಿಯೇ ಎಚ್ಚರಗೊಳ್ಳದಿದ್ದರೆ ಜೀವನವೇ ನಮ್ಮನ್ನು ತನ್ನದೇ ಆದ ರೀತಿಯಲ್ಲಿ ಎಚ್ಚರಿಸುವುದು.

ರುಬಿಯಾ
ಚತುರ್ಥ ಸೆಮಿಸ್ಟರ್
ಪ್ರಶಿಕ್ಷಣಾರ್ಥಿ.

# ಗಂಗಾ ನದಿಯ ಶುದ್ಧೀಕರಣ

ಗಂಗಾ ನದಿಯು ಉತ್ತರ ಪ್ರದೇಶ ಬಿಹಾರ ಜಾರ್ಖಂಡ. ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಹರಿದು ಬಂಗಾಳ ಕೊಲ್ಲಿಯನ್ನು ಸೇರುವಾಗ ಸುಮಾರು 42ಕೋಟಿ ಜನರಿಗೆ ಆಸರೆಯಾಗಿದೆ. ಆದರೆ ಅತಿಯಾದ ಕೈಗಾರಿಕೆಗಳು ತ್ಯಾಜ್ಯವನ್ನು ವಿವೇಚನಾ ರಹಿತವಾಗಿ ನದಿಗೆ ಎಸೆಯುವುದು ಕಸ-ಕಡ್ಡಿ ಅರೆ ಬೆಂದ ಶವಗಳನ್ನು ನದಿಗೆ ಎಸೆಯುವುದು ಸೇರಿದಂತೆ ಹತ್ತಾರು ಮಾನವನ ಕೃತ್ಯಗಳಿಂದಾಗಿ ತೀವ್ರ ಮಾಲಿನ್ಯದಿಂದ ಕೂಡಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರಗಳು ಗಂಗಾನದಿಯ ಶುದ್ಧೀಕರಣಕ್ಕೆ ಹೆಚ್ಚು ಒತ್ತು ನೀಡಿದೆ. ಗಂಗಾ ನದಿಯ ದಡಗಳಲ್ಲಿರುವ ಹರಿದ್ವಾರ. ಹೃಷಿಕೇಶ. ವಾರಣಾಸಿ. ಕಾನ್ಪುರದಂತಹ ನಗರಗಳ ತ್ಯಾಜ್ಯ ಚರಂಡಿ ನೀರನ್ನು ನದಿಗೆ. ಬಿಡಲಾಗುತ್ತದೆ. ಕಾನ್ಪುರ ನಗರವೊಂದರಲ್ಲಿಯೇ ಒಂದು ದಿನಕ್ಕೆ ಒಂದು ಶತಕೋಟಿ ಲೀಟರ್ ಕಲುಷಿತ ನೀರನ್ನು ನದಿಗೆ ಬಿಡಲಾಗುತ್ತದೆ! ಎಂದರೆ ಉಳಿದ ನಗರಗಳ ಮತ್ತು ಕೈಗಾರಿಕೆಗಳ ಕಲುಷಿತ ನೀರಿನ ಪ್ರಮಾಣ ಎಷ್ಟಿರಬಹುದು? ನೀವೇ ಊಹಿಸಿರಿ. ಒಂದು ಅಂದಾಜಿನ ಪ್ರಕಾರು ದಿನನಿತ್ಯ ಗಂಗಾ ನದಿಯಲ್ಲಿ 2ಕೋಟಿ ಜನರು ಸ್ನಾನ ಮಾಡುತ್ತಿದ್ದಾರೆ ಎಂದು ಹೇಳಲಾಗಿದೆ. ವಿಶ್ವ ಸಂಸ್ಥೆಯ ವರದಿಯಂತೆ ನಿಗದಿಪಡಿಸಿದ ಪ್ರಮಾಣಕ್ಕಿಂತ ಮೂರು ಸಾವಿರ ಪಟ್ಟು ಹೆಚ್ಚಾದ ರಾಸಾಯನಿಕ ವಸ್ತುಗಳು ಬ್ಯಾಕ್ಟೀರಿಯಗಳು ಸೇರಿಕೊಂಡಿವೆ ಎಂದು ಹೇಳಿದೆ. ಇದನ್ನು ತಪ್ಪಿಸಲು ಕೇಂದ್ರ ಸರಕಾರವು ಪ್ರತೀ ವರ್ಷ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಪ್ರಯೋಜನವಾಗಿಲ್ಲ. ಗಂಗಾನದಿಯ ಮಾಲಿನ್ಯಕ್ಕೆ ಶೇ ೮೦ರಷ್ಟು ಚರಂಡಿ ನೀರು ಕಾರಣವಾಗಿದೆ. ಉಳಿದ ಪ್ರಮಾಣದಲ್ಲಿ ಕಾರ್ಖಾನೆ ತ್ಯಾಜ್ಯಗಳು ಮತ್ತು ಕೃಷಿವಲಯದ ತ್ಯಾಜ್ಯಗಳಾಗಿವೆ ಎಂದು ರಾಷ್ಟ್ರೀಯ ಗಂಗಾ ನದಿ ಪ್ರಾಧಿಕಾರದ ಸದಸ್ಯ ಡಾ॥ಬಿ.ತ್ರಿಪಾಠಿ ಹೇಳಿದ್ದಾರೆ. ನದಿಯ ಮಾಲಿನ್ಯದಿಂದಾಗಿ ನದಿ ನೀರಿನ ಶೇ20ರಷ್ಟು ನೀರಿನ ಹರಿವು ಕಡಿಮೆಯಾಗಿದೆ ಎಂದು ತಜ್ಞರ ವರದಿಗಳು ತಿಳಿಸುತ್ತವೆ. ನದಿ ಪರಿಸರದ ಕಾರ್ಖಾನೆಗಳು ತಮ್ಮ ತ್ಯಾಜ್ಯ ನೀರನ್ನು ನದಿಗೆ ಸೇರಿಸಿ ಬಿಡಬೇಕು ಎಂಬ ನಿಯಮವಿದೆ. ಆದರೆ ಪರಿಸರ ಇಲಾಖೆಯ ನಿಯಮಗಳನ್ನು ಗಾಳಿಗೆ ತೂರಿರುವ ಕಾರ್ಖಾನೆಗಳು ಕಲುಷಿತ ನೀರನ್ನು ಸೋಸದೆ ನದಿಗೆ ಹಾಗೇ ಬಿಡುತ್ತದೆ. ಗಂಗಾ ನದಿ ಶುದ್ಧೀಕರಣಕ್ಕೆ ಆದ್ಯತೆ ನೀಡಿದರು ಈಗಿನ ಕೇಂದ್ರ ಸರಕಾರವು ಜಲ ಸಂಪನ್ಮೂಲ ಇಲಾಖೆಯಡಿಯಲ್ಲಿ ಗಂಗಾ ನದಿ ಶುದ್ಧಿಕರಣ ಇಲಾಖೆ (ನಮಾಮಿ ಗಂಗೆ ಅಥವಾ ನಿರ್ಮಲ ಗಂಗೆ) ಸ್ಥಾಪಿಸಿ. ಅದಕ್ಕೆ 2000 ಕೋಟಿ ರೂಪಾಯಿಗಳನ್ನು ತೆಗೆದಿರಿಸಿದೆ. ವಿಶ್ವ ಬ್ಯಾಂಕ್‌ನಿಂದ 9000ಕೋಟಿ ರೂಪಾಯಿ ಸಾಲ ಪಡೆಯುವ ಸರಕಾರವು ಈ ಹಣದಲ್ಲಿ ಜಲಸಾರಿಗೆ ಪ್ರವಾಸೋದ್ಯಮ ಮತ್ತು ಶುದ್ಧೀಕರಣಕ್ಕೆ ಆದ್ಯತೆ ನೀಡಲಾಗುವುದು ಎಂದು ಹೇಳಿಕೆ ನೀಡಿದೆ. ನದಿ ಮಾಲಿನ್ಯ ತಡೆಯಲು ಪ್ರತಿ ನೂರು ಕಿ.ಮೀ ಗೊಂದರಂತೆ ಬ್ಯಾರೇಜ್ ಅಥವಾ ಅಣೆಕಟ್ಟು ಅಭಿವೃದ್ಧಿಪಡಿಸಲು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.

ಶ್ರೀಹರಿ ಎಸ್.ಎಲ್
ಚತುರ್ಥ ಬಿ.ಇಡಿ. ಪ್ರಶಿಕ್ಷಣಾರ್ಥಿ

# ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ

63ನೇ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದೊಂದಿಗೆ ಆಚರಿಸಲು ಸಕಲ ಸಿದ್ಧತೆಗಳು ನಡೆದಿವೆ. ಕನ್ನಡಿಗರ ಸ್ವಾಭಿಮಾನದ ಸಂಕೇತವಾದ ರಾಜ್ಯೋತ್ಸವ ಮತ್ತು ಕನ್ನಡ ಬಾವುಟದ ಹಿಂದಿನ ಕತೆ ಮಾತ್ರ ರೋಚಕ. ಕನ್ನಡ ರಾಜ್ಯೋತ್ಸವ ಇತಿಹಾಸ ಅಲ್ಲಲ್ಲ ಚದುರಿದ್ದ ಕನ್ನಡವನ್ನೆಲ್ಲ ಒಂದು ಗೂಡಿಸಿ ಅದಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ ದಿನ. ಇಂದಿನ ಕರ್ನಾಟಕ ಮೊದಲಿಗೆ ಮೈಸೂರು ಹೆಸರಿನಿಂದ ಗುರುತಿಸಿಕೊಂಡಿತ್ತು. ಕನ್ನಡ ರಾಜ್ಯೋತ್ಸವ ಇತಿಹಾಸ ಸ್ವಾತಂತ್ರದ ನಂತರ, ಒಡೆಯರ್ ಮಹಾರಾಜ ಭಾರತದ ಭಾಗವಾಗಲು ಸಮ್ಮತಿಸಿದರು. 1950ರಲ್ಲಿ , ಮೈಸೂರು ಭಾರತದ ರಾಜ್ಯವಾಯಿತು. ಹಾಗು ಪೂರ್ವ ಮಹಾರಾಜ 1957ರ ವರೆಗೆ ರಾಜ್ಯಪಾಲರಾದರು. "ಏಕೀಕರಣ" ಚಳುವಳಿ 19ನೆಯ ಶತಮಾನದ ಎರಡನೇ ಭಾಗದಲ್ಲಿ ಪ್ರಾರಂಭವಾಗಿ 1956 ರಾಜ್ಯ ಪುನಸ್ಸಂಘಟನೆ ಕಾಯಿದೆ ಯೊಂದಿಗೆ ಮುಕ್ತಾಯವಾಯಿತು. ಇದರಿಂದ ಕೂರ್ಗ್, ಮದ್ರಾಸ್, ಹೈದರಾಬಾದ್, ಹಾಗು ಬಾಂಬೆ ರಾಜ್ಯದ ಭಾಗಗಳನ್ನು ಮೈಸೂರು ರಾಜ್ಯಕ್ಕೆ ಸೇರ್ಪಡಿಸಲಾಯಿತು. ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಪುನರ್ನಾಮಕರಣ ಮಾಡಲಾಯಿತು.

ಕರ್ನಾಟಕ ರಾಜ್ಯ ರೂಪುಗೊಂಡಾಗ ಒಟ್ಟು 19 ಜಿಲ್ಲೆಗಳನ್ನು ಒಳಗೊಂಡಿತ್ತು. ಅಂದಿನಿಂದ ನವೆಂಬರ್ 1 ನ್ನು ಕನ್ನಡ ರಾಜ್ಯೋತ್ಸವ / ಕರ್ನಾಟಕ ರಾಜ್ಯೋತ್ಸವವಾಗಿ ಆಚರಿಸಲಾಗುತ್ತದೆ. ಕರ್ನಾಟಕ ಹೆಸರು ಕರ್ನಾಟಕ ಪದದ ಮೂಲದಬಗ್ಗೆ ಹಲವು ಅಭಿಪ್ರಾಯಗಳಿದ್ದರೂ ಸಾಮಾನ್ಯವಾಗಿ "ಕರು" ಮತ್ತು "ನಾಡು" ಸೇರಿ "ಎತ್ತರದ ಭೂಮಿ" ಎಂಬರ್ಥದ ಕರುನಾಡು ಪದದಿಂದ ಉಗಮವಾಗಿದೆ ಎನ್ನಲಾಗಿದೆ. ಕರು ಎಂದರೆ ಕಪ್ಪು, ನಾಡು ಎಂದರೆ ಪ್ರದೇಶ ಎಂದು ಅರ್ಥೈಸಿಕೊಂಡರೆ ಬಯಲು ಸೀಮೆಯ ಕಂಡು ಕಪ್ಪು ಹತ್ತಿ ಮಣ್ಣಿನಿಂದಾಗಿ ಹೆಸರು ಬಂದಿದೆ ಎಂದೂ ಹೇಳಲಾಗುತ್ತದೆ. ಕೃಷ್ಣಾ ನದಿಯ ದಕ್ಷಿಣಕ್ಕೆ ಎರಡೂ ಕಡೆ ಜಲಾವೃತವಾದ ಪ್ರದೇಶವಾದ್ದರಿಂದ ಬ್ರಿಟಿಷರ ಕಾಲದಲ್ಲಿ ಕಾರ್ನಾಟಿಕ್ ಅಥವಾ ಕರ್ನಾಟಕ ಹೆಸರು ಬಳಕೆಗೆ ಬಂತು.

ಕನ್ನಡ ಬಾವುಟ ಕರ್ನಾಟಕಕ್ಕೆ ತನ್ನದೇ ಆದ ಪ್ರತ್ಯೇಕ ಬಾವುಟವಿದೆ. ಕೆಂಪು ಮತ್ತು ಹಳದಿ ಕನ್ನಡ ಧ್ವಜಗಳು ರಾಜ್ಯೋತ್ಸವ ದಿನದಂದು ಕರ್ನಾಟಕ ರಾಜ್ಯಾದ್ಯಂತ ಮಹದಾನಂದ ಮತ್ತು ಚಟುವಟಿಕೆಯಿಂದ ಆಚರಿಸಲಾಗುತ್ತದೆ. ಕನ್ನಡಕ್ಕೊಂದು ಬಾವುಟ ಅವಶ್ಯಕತೆಯನ್ನು ಮನಗೊಂಡ ಕನ್ನಡದ ಹೋರಾಟಗಾರರಾದ ಎಂ ರಾಮಮೂರ್ತಿಗಳು ಹಳದಿ ಹಾಗೂ ಕೆಂಪು ಬಣ್ಣ ಬಳಸಿ, ಬಾವುಟವನ್ನು ಸಿದ್ಧಪಡಿಸಿದರು. ಮೂಲತಃ ಹಳದಿ ಬಣ್ಣವು ಕನ್ನಡಾಂಬೆಯ ಅರಿಶಿನ ಮತ್ತು ಕುಂಕುಮವನ್ನು ಸೂಚಿಸುತ್ತದೆ ಹಾಗೂ ಹಳದಿ ಬಣ್ಣವು ಶಾಂತಿ, ಸೌಹಾರ್ದತೆ ಸೂಚಿಸಿದರೆ ಕೆಂಪು ಬಣ್ಣ ಕ್ರಾಂತಿಯ ಸಂದೇಶ ನೀಡುತ್ತದೆ. ಕನ್ನಡಿಗರೂ ಶಾಂತಿಗೆ ಬದ್ಧ, ಯುದ್ಧಕ್ಕೂ ಸಿದ್ಧ ಎಂಬ ಸಂದೇಶವನ್ನು ನೀಡುತ್ತದೆ

[illegible]

[illegible]

ಅಶ್ವಿನಿ [illegible]
[illegible]
[illegible]

# ಮಕ್ಕಳೇ ಮನೆಯ ಮಾಣಿಕ್ಯ, ಮಕ್ಕಳೇ ದೇಶದ ಸಂಪತ್ತು

ಸಾಮಾನ್ಯವಾಗಿ ಮಕ್ಕಳ ದಿನಾಚರಣೆ ಎಂದಾಕ್ಷಣ ನೆನಪಾಗುವುದು ನಮ್ಮ ಶಾಲೆ, ಆಟ, ಪಾಠ, ಶಾಲೆಯಲ್ಲಿ ಮಾಡಿದ ಗಲಾಟೆ, ಪಡೆದ ಬಹುಮಾನ, ಸಿಹಿತಿಂಡಿ ಹಾಗು ನಮ್ಮ ನೆಚ್ಚಿನ ಚಾಚಾನೆಹರು! ಇವರೆಲ್ಲಾ ನೆನಪುಗಳನ್ನು ಶಾಲೆಗೆ ಹೋಗುವ ಮಕ್ಕಳಲ್ಲಿ ಕಾಣಬಹುದು. ಆದರೆ ಶಾಲೆಗೆ ಹೋಗದ, ಮಧ್ಯದಲ್ಲಿ ಶಾಲೆ ಬಿಟ್ಟ, ಬೀದಿಮಕ್ಕಳ, ಬಾಲಕಾರ್ಮಿಕರ, ಅಪಾಯದ ಅಂಚಿನಲ್ಲಿರುವ ಮಕ್ಕಳ ದಿನಾಚರಣೆಯನ್ನು ಮಾಡುವವರು ಯಾರು? ಅವರ ಹಕ್ಕುಗಳಿಗೆ ರಕ್ಷಣೆ ನೀಡಿ, ಅವರನ್ನು ಸಹ ಇತರ ಸಹಪಾಠಿ ಮಕ್ಕಳ ಹಾಗೆ ಜೀವನ ಕಳೆಯುವಂತೆ ಮಾಡುವ ಮತ್ತು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಜವಾಬ್ದಾರಿ ಯಾರದು? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾದ ಸಂದಿಗ್ಧತೆ ಬಂದಿದೆ. ನೆಹರು ಜನ್ಮದಿನ, ಮಗು ತನದ ಮುಗ್ಧತೆ ಉಳಿಸುವ ಮಕ್ಕಳದಿನ ಮಕ್ಕಳ ಮೇಲೆ ದಿವಂಗತ ಪಂಡಿತ್ ಜವಾಹರ್‌ಲಾಲ್‌ರವರಿಗೆ ಇದ್ದ ಅತೀವ ಕಾಳಜಿ ಮತ್ತು ಪ್ರೀತಿ. ಮಕ್ಕಳ ಹಕ್ಕುಗಳು ಮತ್ತು ಶಿಕ್ಷಣದ ಬಗ್ಗೆ ಅರಿವನ್ನು ಮೂಡಿಸುವ ಉದ್ದೇಶದಿಂದ ನೆಹರು ಜನ್ಮ ದಿನವಾದ ನವೆಂಬರ್ 14ರಂದು ಮಕ್ಕಳ ದಿನವನ್ನಾಗಿ ಆಚರಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಮಕ್ಕಳ ದಿನಾಚರಣೆಯನ್ನು ಶಾಲೆಯಲ್ಲಿ ಆಚರಿಸುವುದಕ್ಕೆ ಹೆಚ್ಚಿನ ಒತ್ತು ನೀಡಿರುವುದನ್ನು ನೋಡುತ್ತಿದ್ದೇವೆ. ಆದರೆ ಇದರ ವಿಶಾಲತೆಯನ್ನು ಗಮನಿಸಿದಾಗ ಇದಕ್ಕೆ ಇರುವ ಪ್ರಾಮುಖ್ಯತೆಯೇ ಬೇರೆ. Childrens Day Special story: Children are the asset of India ಮಕ್ಕಳ ಕ್ಷೇಮಾಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ವಿಶ್ವಸಂಸ್ಥೆಯು 1954ರಿಂದ ನವೆಂಬರ್ 20ರಂದು ವಿಶ್ವ ಮಕ್ಕಳ ದಿನಾಚರಣೆಯನ್ನು ಆಚರಿಸುತ್ತಾ ಬಂದಿದೆ. ಪ್ರಪಂಚದ ಬಹುತೇಕ ದೇಶಗಳು ಈ ದಿನದಂದೇ ಮಕ್ಕಳ ದಿನಾಚರಣೆಯನ್ನು ಆಚರಿಸುತ್ತವೆ. ನವೆಂಬರ್ 1989ರಲ್ಲಿ ಮಕ್ಕಳ ಹಕ್ಕುಗಳ ಸಮಾವೇಶವನ್ನು (Convention on the Rights of the Child-CRC) ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಸರ್ವಾನುಮತದಿಂದ ಅಂಗೀಕರಿಸಿದ್ದು, 190 ದೇಶಗಳು ಇದನ್ನು ಅನುಮೋದಿಸಿದವು. ಶಿಕ್ಷಣ ಮತ್ತು ಜೀವನ ಕ್ರಮ: ಶಿಕ್ಷಣವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೂಲಭೂತ ಅವಶ್ಯಕತೆಯಾಗಿದೆ. 6ರಿಂದ 14ವರ್ಷದ ಮಕ್ಕಳಿಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣವನ್ನು ನೀಡುವ ಗುರಿ ಉದ್ದೇಶವನ್ನು ಹೊಂದಿದ ಕಾಯ್ದೆಯನ್ನು ಹೊಂದಿದ್ದು, ಈ ನಿಟ್ಟಿನಲ್ಲಿ ಸ್ವಲ್ಪ ಮಟ್ಟಿನ ಪ್ರಗತಿಯನ್ನು ಸಹ ಕಾಣುತ್ತಿದೆ. ಆದರೆ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳ ಮೂಲಸೌಕರ್ಯಗಳನ್ನು ಉನ್ನತದರ್ಜೆಗೇರಿಸುವತ್ತಾ ಸರ್ಕಾರವು ಚಿಂತಿಸಬೇಕು. ಶಾಲಾ ಮೂಲಸೌಕರ್ಯಗಳ ಪರಿಶೀಲನೆಯನ್ನು ಪ್ರತಿರ್ಷವು ಮಾಡಬೇಕು. ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣೆ ಸಮಿತಿಯ ಸದಸ್ಯರನ್ನು ಸಬಲೀಕರಿಸಬೇಕು. 14ರಿಂದ 18 ವರ್ಷದ ಮಕ್ಕಳ ಜೀವನದಲ್ಲಿ ಬಹು ಪ್ರಮುಖವಾದ ಹಂತವಾಗಿದ್ದು, ದೈಹಿಕವಾಗಿ ಮತ್ತು ಮಾನಸಿಕವಾಗಿ ಮಕ್ಕಳು ಪ್ರಬುದ್ಧತೆಗೆ ಬರುವ

ವಯಸ್ಸಾಗಿದೆ. ಈ ವಯಸ್ಸಿನ ಮಕ್ಕಳಿಗೆ ಶಾಲಾ ಶಿಕ್ಷಣದ ಜೊತೆಗೆ ಹದಿಹರೆಯದ ಶಿಕ್ಷಣ, ಅಪಾಯಕಾರಿ ಆರೋಗ್ಯ ಸಮಸ್ಯೆಗಳ ಬಗ್ಗೆ ಅರಿವು, ಉತ್ತಮ ಜೀವನ ಶೈಲಿಯ ಅರಿವು ಮೂಡಿಸುವುದರ ಜೊತೆಗೆ ಸುರಕ್ಷಿತ ವಾತಾವರಣ ಕಲ್ಪಿಸಬೇಕು. ಮಕ್ಕಳಿಗೆ ಶಾಲೆಗಳಲ್ಲಿ ದೊರೆಯುವ ಮೂಲ ಸೌಕರ್ಯಗಳ ಮಾಹಿತಿಯನ್ನು ಪೋಷಕರಿಗೆ ನೀಡಬೇಕು. ಸಾರ್ವಜನಿಕರು ಅವುಗಳನ್ನು ಮೇಲ್ವಿಚಾರಣೆ ಮಾಡುವಂತೆ ಮಾಡಬೇಕು. ಮಕ್ಕಳ ರಕ್ಷಣೆ ಮತ್ತು ಸಾಮಾಜಿಕ ಭದ್ರತೆ: ಮಕ್ಕಳ ವಿರುದ್ಧ ಅಪರಾಧ ಮತ್ತು ಮಕ್ಕಳು ಮಾಡಿದ ಅಪರಾಧ ಮಾಹಿತಿಯನ್ನು ನ್ಯಾಷನಲ್ ಕ್ರೈಂರೆಕಾರ್ಡ್ಸ್ ಬ್ಯೂರೋ (ಎನ್.ಸಿ.ಆರ್.ಬಿ) ತಿಳಿಸುತ್ತದೆ. ಇದರ ಪ್ರಕಾರ ಮಕ್ಕಳ ಅಪರಾಧದ ಪ್ರಮಾಣ 2.1 ರಷ್ಟಿದೆ. ಬಡತನ, ಅನಕ್ಷರತೆ, ಪೋಷಕ ಸಂಸ್ಥೆಗಳು, ದುಷ್ಚಟಗಳ ಕಾರಣದಿಂದಾಗಿ ಮಕ್ಕಳು ಅಪರಾಧಗಳಿಗೆ ಒಳಗಾಗುತ್ತಿದ್ದಾರೆ.

ಶಿಲ್ಪಾ ಬಿ
ಚತುರ್ಥ ಬಿ.ಇಡಿ
ಪ್ರಶಿಕ್ಷಣಾರ್ಥಿ

## ಗುರುವಿಗೊಂದು ನಮನ

ಗುರುವೆನಿಮಗೆನಮನ
ಅಜ್ಞಾನದ ಕತ್ತಲನು ಕಳೆದು
ಜ್ಞಾನದ ಬೆಳಕನು ಹರಿಸಿದ ಗುರುವಿಗೊಂದು ನಮನ
ಸನ್ಮಾರ್ಗದಲ್ಲಿ ನಡೆಯುವ
ಮಾರ್ಗವ ತೋರುವ
ಓಗುರುವೆ ನಿಮಗೆ
ಇದೋ ನನ್ನ ನಮನ

ತಾಯಿಯಂತೆ ಪ್ರೀತಿ ತೋರಿ
ತಂದೆಯಂತೆ ಅಭಯ ನೀಡಿ
ಸಮಾಜದ ನಡೆಗೆ ದಾರಿಯಾಗಿ
ಬೇಧ ತೋರದ ಜ್ಯೋತಿಯಾಗಿ
ನಿಜರೂಪದ ದೇವ ಸ್ವರೂಪಿಯಾದ
ಓಗುರುವೇ ನಿಮಗೆ
ಇದೋ ನನ್ನ ನಮನ

ಶಿವಕುಮಾರ್ ಎಂ.ಹೆಚ್
ದ್ವಿತೀಯ ಬಿ.ಇಡಿ
ಪ್ರಶಿಕ್ಷಣಾರ್ಥಿ

# ನಾಡಗೀತೆ



ಜಯ್ ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ

ಜಯ್ ಸುಂದರ ನದಿವನಗಳ ನಾಡೆ
ಜಯಹೇ ರಸಋಷಿಗಳ ಬೀಡೆ
ಭೂದೇವಿಯ ಮುಕುಟದ ನವಮಣಿಯೇ
ಗಂಧದ ಚಂದದ ಹೊನ್ನಿನ ಗಣಿಯೇ
ರಾಘವ ಮಧುಸೂಧನರವತರಿಸಿದ                |ಭಾರತ|

ಜನನಿಯ ಜೋಗುಳ ವೇದದ ಘೋಷ
ಜನನಿಗೆ ಜೀವವು ನಿನ್ನಾವೇಶ
ಹಸಿರಿನ ಗಿರಿಗಳ ಸಾಲೇ
ನಿನ್ನಯ ಕೊರಳಿನ ಮಾಲೆ
ಕಪಿಲ ಪಂತಜಲಿ ಗೌತಮ ಜಿನನುತ                |ಭಾರತ|

ಸರ್ವಜನಾಂಗದ ಶಾಂತಿಯ ತೋಟ
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ                |ಭಾರತ|

ಜನಕನ ಹೋಲುವ ದೊರೆಗಳ ಧಾಮ
ಗಾಯಕ ವೈಣಿಕರಾರಾಮ
ಕನ್ನಡ ನುಡಿ ಕುಣಿದಾಡುವ ಗೇಹ
ಕನ್ನಡ ತಾಯಿಯ ಮಕ್ಕಳ ದೇಹ
ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ                - ರಾಷ್ಟ್ರಕವಿ ಕುವೆಂಪು

ಭಾಷಾ ಸಂಘದ ಚಟುವಟಿಕೆಗಳ ಚಿತ್ರ ಸಂಗ್ರಹ



















